

## ಸರ್ವಮೂಲ ಸಂದೇಶ

ನಮೋಽಮಂದನಿಜಾನಂದಸಾಂದ್ರಸುಂದರಮೂರ್ತಯೇ।
ಇಂದಿರಾಪತಯೇ ನಿತ್ಯಾನಂದಭೋಜನದಾಯಿನೇ॥

–ಉಪಾಧಿಖಂಡನ

ಪೂರ್ಣವಾದ, ಸ್ವಾಭಾವಿಕವಾದ ಆನಂದವೇ ತನ್ನ ಸ್ವಭಾವವಾಗಿರುವ, ಜ್ಞಾನಿಗಳಿಗೆ ಮುಕ್ತಿಯಲ್ಲಿ ನಾಶರಹಿತಆನಂದವನ್ನು ಉಣಿಸುವ ಶ್ರೀಲಕ್ಷ್ಮೀವಲ್ಲಭನಿಗೆ ನಮಸ್ಕಾರವು.

**–ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದರು**


ಸಂಪುಟ–೭ ಸಂಚಿಕೆ–೬ ಸರ್ವಧಾರಿ ಸಂ.॥ ವೈಶಾಖ–ಜ್ಯೇಷ್ಠ ಜೂನ್ ೨೦೦೮

ಸಂಸ್ಥಾಪಕರು:

ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು

ಶ್ರೀವಿದ್ಯಾಮಾನ್ಯ ಪ್ರಕಾಶನ

ಶ್ರೀಮದ್ ಹೃಷೀಕೇಶ ತೀರ್ಥ ಸ್ವಾಮಿಯರ್ ಸ್ಮಾರಕ ಟ್ರಸ್ಟ್ (ರಿ.)

ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

ಅಂತರ್ಜಾಲ ವಿಳಾಸ

**sarvamoola@udupishripalimarumatha.org**


## ವಿಷಯಾನುಕ್ರಮಣಿಕೆ


| | | |
|---|---|---|
| ಉದ್ಧವಗೀತೆ | ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು | 1 |
| ವಿದ್ವತ್ ಪ್ರಪಂಚ | ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು | 3 |
| ವಿದುರನೀತಿ | ಶ್ರೀ ವಿಶ್ವಪ್ರಿಯತೀರ್ಥ ಶ್ರೀಪಾದರು | 5 |
| ಉಪನಿಷತ್ ಚಿಂತನ | ವಿ॥ ಬನ್ನಂಜೆ ಗೋವಿಂದಾಚಾರ್ಯ | 8 |
| ಮುಖಪುಟ ಲೇಖನ | ಶ್ರೀ ಬಿ. ಶ್ರೀನಿವಾಸಭಟ್ | 10 |
| ಭಾರತ ಭಾವದರ್ಪಣ | ವಿ॥ ರಾಮವಿಟ್ಠಲಾಚಾರ್ಯ | 11 |
| ಹರಿಭಕ್ತಿಸಾರ– | ವಿ॥ ಹಯವದನ ಪುರಾಣಿಕ | 13 |
| ಉಪನಿಷತ್ ಸಂದೇಶ | ಡಾ॥ ಎನ್. ವೆಂಕಟೇಶ್ | 16 |
| ಅವಲೋಕನ | ವಿ॥ ಸಗ್ರಿ ರಾಘವೇಂದ್ರಾಚಾರ್ಯ | 18 |
| ನಾರಾಯಣವರ್ಮ | ವಿ॥ ಬೆ.ನಾ. ವಿಜಯೀಂದಾಚಾರ್ಯ | 20 |
| ಆಯುರ್ಯಜ್ಞ | ಶ್ರೀ ಸುನಂದಕೀ | 23 |
| ಶ್ರೀಮಧ್ವಚರಿತ್ರೆ | ವಿ॥ ಅನಂತಕೃಷ್ಣಾಚಾರ್ಯ | 25 |
| ಹರಿಕಥಾಮೃತಸಾರ | ವಿ॥ ಕೆ. ಅಪ್ಪಣ್ಣಾಚಾರ್ಯ | 27 |
| ವ್ಯಾಸಜಯಂತಿಯ ಪಂಚಕಜ್ಞಾಯ | ಸಂಗ್ರಹ:–ಸಗ್ರಿ | 29 |
| ನಾಯಮಾತ್ಮ ಪ್ರವಚನೇನ ಲಭ್ಯಃ | ವಿ॥ ತಿರುಮಲ ಕುಲಕರ್ಣಿ | 31 |
| ಆರಾಧನಾ ವೈಭವ | ಸಂಗ್ರಹ:–ಸಗ್ರಿ | 33 |
| ಪುರಾಣ ಪ್ರಪಂಚ | ಸ್ಫೂರ್ತಿ | 39 |
| ನೆನಪಿನ ಅಂಗಳ | ವಿ॥ ಶಂಕರನಾರಾಯಣಾಚಾರ್ಯ | 41 |



**ಪ್ರಕಾಶಕರು**

ಶ್ರೀ ಶಿಬರೂರು ವೇದವ್ಯಾಸ ತಂತ್ರಿ, ಉಡುಪಿ

**ಪ್ರಧಾನ ಸಂಪಾದಕರು**

ವಿ।ಸಗ್ರಿ ರಾಘವೇಂದ್ರ ಉಪಾಧ್ಯಾಯ, ಉಡುಪಿ

**ಸಂಪಾದಕ ಮಂಡಳಿ:**

ವಿ॥ ಬಲರಾಮ ಭಟ್ಟ, ಉಡುಪಿ
ವಿ॥ ಮೋಹನಾಚಾರ್ಯ ಬೆಂಗಳೂರು
ವಿ॥ ಗಿರೀಶ ಉಪಾಧ್ಯಾಯ, ಕುತ್ಯಾರು

**ಸಲಹಾ ಮಂಡಳಿ**

ಶ್ರೀ ರಘುಪತಿ ತಂತ್ರಿ, ಬೆಂಗಳೂರು
ಶ್ರೀ ಲಕ್ಷ್ಮೀನಾರಾಯಣ ಶರ್ಮ ಉಡುಪಿ
ಶ್ರೀ ಹರ್ಷ ಬೆಂಗಳೂರು

**ಅಕ್ಷರ ವಿನ್ಯಾಸ:** ಸ್ವಾತಿ ಭಾಗವತ್ ಉಡುಪಿ

**ವಾರ್ಷಿಕಚಂದಾ :** ರೂ. 90.00
**15 ವರ್ಷಕ್ಕೆ** : ರೂ. 1,250.00
**ಸದಸ್ಯರು** : ರೂ. 2,250.00
**ಪೋಷಕರು : ರೂ.** 3,000.00


**ಅಯಾಯ ಲೇಖನಗಳಿಗೆ ಲೇಖಕರೇ ಜವಾಬ್ದಾರರು**

# ಉದ್ಧವಗೀತೆ

–ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು
ಶ್ರೀ ಪಲಿಮಾರು ಮಠ, ಉಡುಪಿ

**ಬ್ರೂಹಿ ಸ್ಪರ್ಶವಿಹೀನಸ್ಯ ಭವತಃ ಕೇವಲಾತ್ಮನಃ॥**

ಭಗವಂತನಾದ ಶ್ರೀಕೃಷ್ಣನು ಉಪದೇಶಕ್ಕೆ ಅಣಿಯಾಗಿ ನಿಂತ ಅವಧೂತರನ್ನು ಯದುವಿನ ಬಾಯಲ್ಲಿ ಬಾಯಿತುಂಬ ಹೊಗಳಿಸಿದ್ದು "ಸ್ಪರ್ಶವಿಹಿನಸ್ಯ" ಎಂದು. ಮೇಲ್ನೋಟಕ್ಕೆ ಕಾಣುವ ಅರ್ಥ ಎಲ್ಲರಿಗೂ ಗೊತ್ತಾಗುವುಂಥಹದ್ದು. ಆದರೆ ಈ ಸ್ಪರ್ಶವಿಹೀನಸ್ಯ ಎಂಬ ಶಬ್ದದಲ್ಲಿ ಸಾಧನದ ಮಜಲನ್ನೇ ಹರಿಸಿದ್ದಾನೆ. ದೇವರು ಮೆಚ್ಚಲು ಮಹಾಸಾಧನೆ ಭಕ್ತಿ. ಭಕ್ತಿ ಅಂದರೆ ಪ್ರೇಮ. ಈ ಪ್ರೇಮಕ್ಕೆ ಎರಡು ಮುಖಗಳು. ಒಂದು ಜ್ಞಾನ. ಇನ್ನೊಂದು ತ್ಯಾಗ. ಜ್ಞಾನ ವೃದ್ಧಿಯಾದಷ್ಟು ಪ್ರೇಮ ದೃಢವಾಗುತ್ತದೆ. ಆದರೆ ಅಷ್ಟೇ ಸಾಲದು. ತ್ಯಾಗವೂ ಅತ್ಯಗತ್ಯ. ಲೋಕದಲ್ಲೂ ಅಷ್ಟೇ ಪ್ರೇಮಕ್ಕಾಗಿ ಎಂತಂಥಹ ತ್ಯಾಗವನ್ನು ಮಾಡುವವರಿದ್ದಾರೆ. ಅದೆಲ್ಲ ಒಣ ಭಕ್ತಿ. ಭಗವಂತನಿಗಾಗಿ ಪ್ರಪಂಚವನ್ನೇ ತ್ಯಾಗ ಮಾಡಿದರೆ ನಿಜವಾದ ಭಕ್ತಿ ಎನಿಸುವುದು. ಈ ಸರ್ವತ್ಯಾಗವನ್ನು ವಿವರಿಸುವ ಶಬ್ದ ಸ್ಪರ್ಶವಿಹೀನಸ್ಯ ಎಂದು.

ಸಾಮಾನ್ಯವಾಗಿ "ಜಿಹ್ವೋಪಸ್ಥ ಜಯೋ ಜಯಃ" ಎಂದು ವಿರಕ್ತಿಯನ್ನು ಬಣ್ಣಿಸುವುದುಂಟು. ಇದರ ಅರ್ಥ ನಾಲಗೆಯನ್ನು ಗೆದ್ದರೆ, ಉಪಸ್ಥವನ್ನು ಗೆದ್ದರೆ, ಎಲ್ಲವನ್ನೂ ಗೆದ್ದವ ಎಂದು. ಯದು ಇನ್ನೂ ಮುಂದುವರೆದು ಅವಧೂತರಿಗೆ ನೀಡಿದ ಪ್ರಶಸ್ತಿ "ಸ್ಪರ್ಶವಿಹೀನ" ಎಂದು, ಎಲ್ಲಾ ಇಂದ್ರಿಯಗಳ ಹಿನ್ನಲೆಯಲ್ಲಿ "ಸ್ಪರ್ಶ ಇಂದ್ರಿಯದ" ಪಾತ್ರ ಪ್ರಮುಖವಾದುದು. ಪ್ರತಿಯೊಂದು ಇಂದ್ರಿಯವು ಕೂಡ ಸ್ಪರ್ಶದಲ್ಲಿ ಪರ್ಯವಸವಾಗುವಂತಹದು.

ಕಣ್ಣು ನೋಡಿದರೆ ತೃಪ್ತಿಯಿಲ್ಲ. ಎದೆಹಾಲು ಉಣ್ಣುವ ಮಗುವಿನಿಂದ ಪ್ರಾರಂಭಮಾಡಿ ಹಣ್ಣು ಹಣ್ಣು ಮುದುಕನ ತನಕ ಪರೀಕ್ಷಿಸಿದರೂ ಇದು ಸುಸ್ಪಷ್ಟ. ಮಧ್ಯದ ಹದಿಹರಯದ ಯುವಕರ ಪಾಡೇನು. ಮಗು ತಾನು ಕಂಡದ್ದು ಬೆಂಕಿಯಾದರೂ ಸರಿ, ಸ್ಪರ್ಶಿಸದೇ ತೃಪ್ತಿಯಿಲ್ಲ. ಕಿವಿಯೂ ಅಷ್ಟೇ. ಕೇಳಿದರೆ ತೃಪ್ತಿಯಿಲ್ಲ, ಕಾಣಬೇಕು ಕಂಡ ಮೇಲೆ ಮುಟ್ಟಬೇಕು. ಮೂಗೂ ಇದಕ್ಕೇನು ಕಡಿಮೆಯಲ್ಲ. ಪರಿಮಳ ಮೂಗಿಗೆ ಬಡಿದರೆ, ಅದನ್ನು ಮುಟ್ಟಿ ಮೂಸಬೇಕು. ಇಲ್ಲ ಬಾಯಿಗಿಡಬೇಕು. ಎಲ್ಲ ಇಂದ್ರಿಯಗಳ ಪರ್ಯವಸಾನ ಸ್ಪರ್ಶದಲ್ಲಿ.

ನಂಬಿದವರ ಸಲಹುವವರಲ್ಲಿ ಶ್ರೀಕೃಷ್ಣನೇ ಅಗ್ರಗಣ್ಯ



ಒಳ ಇಂದ್ರಿಯ ಮನಸ್ಸು ಇದಕ್ಕೆ ಹೊರತಲ್ಲ. ದೇವರ ಮಾಯೆ ಅತ್ಯದ್ಭುತ. ನಖ–ಶಿಖಾಂತ, ಅಡಿಯಿಂದ ಮುಡಿಯ ತನಕ ಸ್ಪರ್ಶೇಂದ್ರಿಯದ ವ್ಯಾಪ್ತಿ. ಹಾಗಾಗಿ ಕಾಲಿನಿಂದ ತುಳಿದು ತೃಪ್ತಿ ಪಡುವವರಿದ್ದಾರೆ. ಕೈಯಿಂದ ಬಡಿದು ಆನಂದ ಅನುಭವಿಸುವವರಿದ್ದಾರೆ. ಯಾವುದೇ ಭಾಗದಲ್ಲಿ ಸ್ಪರ್ಶೇಂದ್ರಿಯ ಇಲ್ಲವೆಂದಿಲ್ಲ. ಸ್ಪರ್ಶವಿಹೀನನಾಗಬೇಕಾದರೆ ಅದೆಂತಹ ಸಾಧನೆ. ದಧೀಚಿ ಋಷಿಗಳಲ್ಲಿ ಇಂದ್ರಾದಿ ದೇವತೆಗಳು ವಜ್ರಾಯುಧದ ತಯಾರಿಕೆಗಾಗಿ ಎಲುಬನ್ನೇ ಬೇಡಿದಾಗ ದಾನ ಮಾಡಿದ ದಧೀಚಿ ಋಷಿಗಳ ಸ್ಪರ್ಶಹೀನತೆ ಕಲ್ಪನಾತೀತವಾದುದು. ಎಣಿಸಲೂ ಆಗದು. ಒಂದು ತುಣುಕು ರಕ್ತಹೋದರೆ ಊರಿಡೀ ಬೊಬ್ಬಿಡುವ ಈ ಮಂದಿಗೆ ಸ್ಪರ್ಶಹೀನತೆಯ ವಿಚಾರವೇ ಗಗನಕುಸುಮವೆನಿಸಬಹುದು. ಒಂದು ರೀತಿಯಲ್ಲಿ ಈ ಸ್ಪರ್ಶಹೀನತೆ "ಸೆಲ್ಫ್ ಎನಸ್ತೇಶಿಯಾ" ಎಂದರೂ ತಪ್ಪಾಗಲಾರದು. ಅವಧೂತರಿಗೆ ಈ ಸ್ಪರ್ಶೇಂದ್ರಿಯದ ನಿಯಂತ್ರಣೆ ಸಹಜ. ಅದಕ್ಕೆಂದೇ ಭಗವಂತ ಭಗವದ್ಗೀತೆಯಲ್ಲಿ ಕೂಡ "ಮಾತ್ರಾ **"ಸ್ಪರ್ಶಾಸ್ತು** ಕೌಂತೇಯ ಶೀತೋಷ್ಣ ಸುಖದುಃಖದಾಃ" ದುಃಖದ ಮೂಲವಾದ ಅಭಿಮಾನಕ್ಕೆ ಹೇತುವನ್ನು ವಿಶ್ಲೇಷಣೆ ಮಾಡುವಾಗ ಸ್ಪರ್ಶ ಶಬ್ದವನ್ನೇ ಬಳಸಿದ್ದಾನೆ. ದುಃಖದ ಮೂಲ ಅಭಿಮಾನ. ಅದಕ್ಕೂ ಮೂಲ ಸ್ಪರ್ಶ. ಅಂದರೆ ತ್ವಕ್ ಇಂದ್ರಿಯ. ಇದನ್ನು ಗೆದ್ದ ಅವಧೂತ ನಿಜವಾಗಿ ದುಃಖರಹಿತನಾಗಲೇಬೇಕು. ಅದಕ್ಕೆಂದೇ ಆತ ಆನಂದಮಯ ಎನ್ನುವುದರಲ್ಲಿ ಎರಡು ಮಾತಿಲ್ಲ.

"ಅವಧೂತನಿಗೆ ಶರೀರ ಇದೆ. ಆದರೆ ಶರೀರದ ಜೊತೆಗೆ ಸ್ಪರ್ಶದ ಬಾಧೆ ಇಲ್ಲ". ಎಂಬುದು ನಂಬಲಾಗದಾದರೂ ಸತ್ಯ. ಬೆಂಕಿ ಇದ್ದಲ್ಲಿ ಹೊಗೆ ಸಹಜ ಹಾಗೆ ಶರೀರ ಇದ್ದಲ್ಲಿ ಸ್ಪರ್ಶದ ಬಾಧೆ ಅನಿವಾರ್ಯ. ಅವಧೂತನಿಗೆ ಇದು ಹೇಗೆ ಸಾಧ್ಯ. ಇದಕ್ಕೆ ಉತ್ತರ ಸುಲಭ. ಬೆಂಕಿ ಇದ್ದಲ್ಲಿ ಹೆಚ್ಚು ಕಡೆ ಹೊಗೆ ಇದೆ. ಆದರೆ ಹೊಗೆಯಿಲ್ಲದ ಜಾಗವೂ ಇದೆ. ಹೊಗೆ ಎಲ್ಲಿದೆ ಎಂದು ವಿಚಾರಿಸಿದರೆ ಕಟ್ಟಿಗೆ ಒದ್ದೆಯಾಗಿದ್ದರೆ ಮಾತ್ರ ಬೆಂಕಿ ಹೊಗೆ ಉಗುಳುತ್ತದೆ. ಕಾದ ಕಬ್ಬಿಣಕ್ಕೆ ಹೊಗೆಯ ಹಗೆ ಹೇಗೆ ತಾನೇ ಸಾಧ್ಯ. ಅವಧೂತ ಒದ್ದೆ ಕಟ್ಟಿಗೆ ಅಲ್ಲ, ಕಾದ ಕಬ್ಬಿಣ. ಅದನ್ನೇ ಯದು ಹೇಳುತ್ತಾ "ಕೇವಲಾತ್ಮನಃ" ಎಂದು ಅವಧೂತರನ್ನು ಸ್ತುತಿಸಿದ್ದಾನೆ. ಕೇವಲ ಶರೀರವನ್ನು ಸ್ವೀಕರಿಸಿದ್ದಾನೆ, ಆದರೆ ಶರೀರದ ಜೊತೆಗೆ ಸಹಜವಾದ ಸ್ಪರ್ಶದ ಬಾಧೆಗೆ ಸಿಲುಕಿ ಒದ್ದಾಡುವವನಲ್ಲ. ಸ್ಪರ್ಶವನ್ನು ಗೆದ್ದವ ಸಂಸಾರವನ್ನು ಗೆದ್ದವ ಭಗವಂತನ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕದಲ್ಲಿ ಉತ್ತೀರ್ಣನಾದವ. ಭಗವಂತ ಕೃಪಾಕಟಾಕ್ಷಕ್ಕೆ ಪಾತ್ರನಾದವ. ಇದೇ ಸಾಧನ. ಇದೇ ದಾರಿದೀವಿಗೆ.

★

ಇದು ವೇದ–ಮಹಾಭಾರತ ಮುಂತಾದ ಇತಿಹಾಸ–ಪುರಾಣಗಳ ಸಾರ.

ವಿದ್ವತ್ ಪ್ರಪಂಚ

ಭಾಗ–೪



# ಶ್ರೀಮಧ್ವಮತದ ವೈಶಿಷ್ಟ್ಯಗಳು

–ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು

## ಆಚಾರ್ಯ ಮಧ್ವರ ಸುಭಾಷಿತಗಳು

**ಶ್ರದ್ಧಾಸ್ವರೂಪಂ ಜೀವಸ್ಯ ತಸ್ಮಾತ್ ಶ್ರದ್ಧಾ ವಿಭೇದತಃ ।**
**ಉತ್ತಮಾಧಮಮಧ್ಯಾಸ್ತು ಜೀವಾಜ್ಞೇಯಾ ಪೃಥಕ್‌ಪೃಥಕ್ ॥**

ಶ್ರದ್ಧೆಯು ಜೀವನ ಸ್ವರೂಪವೇ ಆಗಿದೆ. ಆದ್ದರಿಂದ ಶ್ರದ್ಧೆಗೆ ಅನುಗುಣವಾಗಿ ಜೀವರನ್ನು ಉತ್ತಮ, ಮಧ್ಯಮ, ಅಧಮರೆಂದು ವಿಂಗಡಿಸಬಹುದು.

**ಸ್ವರೂಪಭೂತಾ ಶ್ರದ್ಧೈವ ತಮೋಗಾನಾಂ ಚ ಮೋಕ್ಷಿಣಾಂ ।**
**ಶಿಷ್ಯತೇ ಸಂಸೃತಿಸ್ಥಾನಾಂ ಶ್ರದ್ಧಾರೂಪಂ ಮನೋಪರಂ ।**
**ತತ್ರ ಸ್ವರೂಪಶ್ರದ್ಧೈವ ವ್ಯಜ್ಯತೇ ಪ್ರಾಯಶಃ ಕ್ವಚಿತ್ ।**

ಮುಕ್ತಿಯನ್ನು ಹೊಂದಿದ ಸಾತ್ವಿಕರ ಮತ್ತು ತಮಸ್ಸನ್ನು ಹೊಂದಿದ ತಾಮಸರ ಸ್ವರೂಪಭೂತವಾದ ಶ್ರದ್ಧೆಯು ಮಾತ್ರ ಉಳಿದಿರುತ್ತದೆ. ಸಂಸಾರದೆಸೆಯಲ್ಲಿ ತ್ರಿವಿಧ ಜೀವರಿಗೂ ಅಂತಃಕರಣ ಪರಿಣಾಮರೂಪವಾದ ಇನ್ನೊಂದು ಶ್ರದ್ಧೆಯೂ ಇರುತ್ತದೆ. ಈ ಶ್ರದ್ಧೆಯು ಪ್ರಾಯಃ ಸ್ವರೂಪ ಶ್ರದ್ಧೆಗೆ ಅನುಗುಣವಾಗಿಯೇ ವ್ಯಕ್ತವಾಗುತ್ತದೆ.

**ಸಾತ್ವಿಕಸ್ಯ ತಮೋರೂಪಾ ಶ್ರದ್ಧಾಂತಃ ಕರಣಾತ್ಮಿಕಾ ।**
**ಸಾತ್ವಿಕೀ ತಾಮಸಸ್ಯಾಪಿ ಭೂಯಸ್ತ್ವಾತ್ ತದ್ವಿವಿಚ್ಯತೇ ॥**

ಸಾತ್ವಿಕ ಜೀವನ ಅಂತಃಕರಣಪರಿಣಾಮರೂಪವಾದ ಶ್ರದ್ಧೆಯು ಕೆಲವೊಮ್ಮೆ ತಾಮಸವೂ ಆಗಿರಬಹುದು. ಹಾಗೆಯೇ ತಾಮಸನ ಶ್ರದ್ಧೆಯೂ ಸಾತ್ವಿಕವಾಗಿರಬಹುದು. ಆದರೆ ಯಾರಿಗೆ ಹೆಚ್ಚಾಗಿ ಯಾವ ವಿಧದ ಶ್ರದ್ಧೆ ಉಂಟಾಗುವುದೋ ಅದರ ಆಧಾರದಿಂದ ಅವರು ಸಾತ್ವಿಕರೋ ರಾಜಸರೋ ಎಂದು ನಿರ್ಣಯಿಸಬೇಕು.

**ಆತನನ್ನು ನಂಬಿ ಕೆಟ್ಟವರಿಲ್ಲ.**



**ಶ್ರದ್ಧೇತಿ ಅಸ್ತಿಕ್ಯನಿಷ್ಠೋಕ್ತಾಸಾಯೇಷಾಂ ದೇವತೋತ್ತಮೇ ।**

ಶ್ರದ್ಧೆ ಎಂದರೆ ಆಸ್ತಿಕ್ಯನಿಷ್ಠೆ. ದೇವೋತ್ತಮನಾದ ಶ್ರೀಮನ್ನಾರಾಯಣನಲ್ಲಿ ಈ ನಿಷ್ಠೆ ಇದ್ದರೆ ಅವನು ಸಾತ್ವಿಕ.

**ವಿಷ್ಣುತದ್ಭಕ್ತಬುದ್ಧ್ಯೈವ ರಮಾಬ್ರಹ್ಮಾದಿಕೇಷು ಚ ।**
**ತೇ ಸಾತ್ವಿಕಾ ಇತಿ ಜ್ಞೇಯಾ ತೈರಿಷ್ಟಂ ವಿಷ್ಣುತೇವ ತು ॥**

ವಿಷ್ಣುವನ್ನು ಸರ್ವೋತ್ತಮನೆಂದೂ ರಮಾ ಬ್ರಹ್ಮಾದಿಗಳನ್ನು ಅವನ ಭಕ್ತರೆಂದೂ ತಿಳಿದುಕೊಂಡವರು ಸಾತ್ವಿಕರು. ಅವರು ಮಾಡಿದ ಸತ್ಕರ್ಮಗಳನ್ನು ಶ್ರೀಹರಿ, ರಮಾ, ಬ್ರಹ್ಮಾದಿಗಳು ಪ್ರೀತಿಯಿಂದ ಸ್ವೀಕರಿಸುವರು.

**ವ್ಯಾಮಿಶ್ರಯಾಜಿನೋ ಯೇ ತು ವಿಷ್ಣ್ವಾಧಿಕ್ಯೇ ಸಸಂಶಯಾಃ ।**
**ಸ್ವರೂಪಮಾತ್ರೇ ದೇವಾನಾಂ ಶ್ರದ್ಧಾಯುಕ್ತಾಶ್ಚ ಸರ್ವದಾ ।**
**ರಾಜಸಾಸ್ತೇ ತು ವಿಜ್ಞೇಯಾಃ ತೈರಿಷ್ಟಂ ಯಕ್ಷರಾಕ್ಷಸಾಃ ॥**

ವಿಷ್ಣುಸರ್ವೋತ್ತಮತ್ವದಲ್ಲಿ ಸಂದೇಹವುಳ್ಳವರಾಗಿ ಯಾರು ಸರಿಯಾದ ತಾರತಮ್ಯ ಜ್ಞಾನವಿಲ್ಲದೆ ದೇವತೆಗಳ ಸ್ವರೂಪಗಳಲ್ಲಿ ಮಾತ್ರ ನಂಬಿಕೆಯಿದ್ದು ಸತ್ಕರ್ಮಗಳನ್ನು ಮಾಡುವರೋ ಅವರ ಕರ್ಮಫಲವನ್ನು ಬ್ರಹ್ಮರುದ್ರಾದಿ ಹೆಸರುಳ್ಳ ರಾಕ್ಷಸರು ಸ್ವೀಕರಿಸುವರು.

**ಗೃಹ್ಣಂತಿಯೇ ಹರಿಂ ತ್ವನ್ಯದೇವಾದಿಸಮಮೇಮ ತು ।**
**ನೀಚಂ ಬ್ರಹ್ಮಾದ್ಯನನ್ಯಂ ವಾ ಮನ್ಯಂತೇ ನೇತಿ ಚಾಖಿಲಂ ।**
**ತತ್ತತ್ ಶ್ರದ್ಧಾಯುತಾಸ್ತೇ ತು ತಾಮಸಾಃ ಪರಿಕೀರ್ತಿತಾಃ ।**
**ಭೂತಪ್ರೇತಾಸ್ತು ತೈರಿಷ್ಟಂ ಶಿವಸ್ಕಂದಾದಿನಾಮಕಾಃ ॥**

ಶ್ರೀಹರಿಯನ್ನು ಇತರ ದೇವತೆಗಳ ಸಮಾನನನ್ನಾಗಿ, ನೀಚನನ್ನಾಗಿ ಅಥವಾ ಅವರಿಂದ ಅಭಿನ್ನನನ್ನಾಗಿ ತಿಳಿಯುವವರು ತಾಮಸರು. ಇವರು ಶಿವಪರಿವಾರರಾದ ಭೂತಪ್ರೇತಾದಿಗಳನ್ನು ಪೂಜಿಸುವರು.

(ಮುಂದುವರಿಯುವುದು)

**ಇದು ಬರಿಯ ಮಾತಲ್ಲ, ಅನುಭಾವಿಗಳ ಅನುಭವದ ಮಾತು.**

ಪ್ರವಚನ ಮಾಲಿಕೆ ಭಾಗ–3

# ವಿದುರನೀತಿ

–ಶ್ರೀ ಶ್ರೀ ವಿಶ್ವಪ್ರಿಯತೀರ್ಥಶ್ರೀಪಾದರು, ಶ್ರೀಅದಮಾರುಮಠ, ಬರಹಃ ಕೃಷ್ಣಾ

~~~~~~~~~~~~~~~~~~~~~~~~~~~~~~~~~~~~~~~~

ವಿದುರನು ಪಂಡಿತರ ಲಕ್ಷಣಗಳನ್ನು ಧೃತರಾಷ್ಟ್ರನಿಗೆ ಮುಂದೆ ವಿವರಿಸುತ್ತಾ

**ಆತ್ಮಜ್ಞಾನಂ ಸಮಾರಂಭಸ್ತಿತಿಕ್ಷ ಧರ್ಮನಿತ್ಯತಾ**
**ಯಮರ್ಥಾಆನ್ನಾ ಪಕರ್ಷಂತಿ ಸ ವೈ ಪಂಡಿತ ಉಚ್ಯತೇ**

**‘ಆತ್ಮಜ್ಞಾನಂ’**–ಯಾವನು ಆತ್ಮಜ್ಞಾನಿಯಾವುದಿಲ್ಲವೋ ಅವನನ್ನು ‘ಪಂಡಿತ’ ಎಂದು ಕರೆಯರು. ಆತ್ಮಜ್ಞಾನವೆಂದರೆ ತನ್ನನ್ನು ತಾನು ತಿಳಿಯುವುದು. ಈ ಆತ್ಮಜ್ಞಾನವು ಶಾಸ್ತ್ರದಿಂದ ಅಧ್ಯಯನದಿಂದ ಬರಬೇಕು. ವ್ಯಕ್ತಿ ತಾನು ಪಂಡಿತ ಎಂದು ಎನಿಸಿಕೊಳ್ಳುವುದು ಅವನ ಶಾಸ್ತ್ರದ ಅಧ್ಯಯನದಿಂದಾಗಿ. ಅಧ್ಯಯನದಿಂದ ಆತ್ಮನನ್ನು ತಿಳಿದುಕೊಳ್ಳಬೇಕು. ‘ಆತ್ಮ’ ಅಂದರೆ ಯಾರು? ಈ ಶರೀರದಲ್ಲಿ ಇಬ್ಬರು ಆತ್ಮರು ಸೇರಿಕೊಂಡಿದ್ದಾರೆ. ಒಬ್ಬ ಜೀವಾತ್ಮ, ಇನ್ನೊಬ್ಬ ಪರಮಾತ್ಮ. ಈ ಇಬ್ಬರನ್ನು ಆತ್ಮ ಎಂಬ ಶಬ್ದದಿಂದ ಕರೆಯುತ್ತೇವೆ. ಅವರಲ್ಲಿ ಏರುಪೇರನ್ನು ಹೇಳುವ ಸಲುವಾಗಿ ಜೀವಾತ್ಮ, ಪರಮಾತ್ಮ ಎಂದು ಹೇಳುತ್ತೇವೆ. ಚೇತನ ಎನ್ನತಕ್ಕಂತಹ ಶಬ್ದಪ್ರಯೋಗ ಮಾಡಿಬಿಟ್ಟರೆ ಇಬ್ಬರಿಗೂ ಬಂತು. ಇಬ್ಬರೂ ಚೇತನರು. ಚೇತನ ಶಬ್ದಕ್ಕೆ ಅರ್ಥ ಏನು? ಯಾರಲ್ಲಿ ತಿಳುವಳಿಕೆ, ಇಚ್ಛೆ, ಕರ್ತೃತ್ವಶಕ್ತಿ ಸ್ವತಂತ್ರವಾಗಿರಲಿ, ಪರತಂತ್ರವಾಗಿರಲಿ ಇದೆಯೋ ಅವನನ್ನು ಚೇತನ ಎಂದು ಕರೆದರು. ಅವನಿಗೆ ತಿಳುವಳಿಕೆ ಬೇಕು. ಇಚ್ಛೆ ಬೇಕು. ಮಾಡಲಿಕ್ಕೆ ಬೇಕಾಗಿರತಕ್ಕಂತಹ ಶಕ್ತಿ ಬೇಕು. ಅವನನ್ನೇ ‘ಆತ್ಮ’ ಎಂದು ಕರೆದರು. ಆ ಆತ್ಮ ಅಥವಾ ಚೇತನ ಎಂದು ಹೇಳಿದಾಗ ಜೀವನೂ ಆದ, ಈಶನೂ ಆದ. ಜೀವನಿಗೂ ತಿಳುವಳಿಕೆ ಇದೆ. ಇಚ್ಛೆ ಇದೆ ಮಾಡತಕ್ಕಂತಹ ಶಕ್ತಿಯೂ ಇದೆ. ಭಗವಂತನಿಗೂ ಇದೆ. ಆದ್ದರಿಂದ ಇಬ್ಬರೂ ಚೇತನರಾದರು. ಆದರೆ ಇಬ್ಬರಲ್ಲಿ ಹೆಚ್ಚು ಕಮ್ಮಿ ಏನು? ಅವ ಪರಮ ಆತ್ಮ. ಇವ ಜೀವಾತ್ಮ, ಅಲ್ಪಾತ್ಮ. ಆದ್ದರಿಂದ ‘ಆತ್ಮಜ್ಞಾನಂ’– ಈ ಶರೀರದಲ್ಲಿ ಸೇರಿಕೊಂಡಿರತಕ್ಕಂತಹ ಇಬ್ಬರು ಚೇತನರನ್ನು ತಿಳಿದುಕೊಳ್ಳಬೇಕು. ನಮ್ಮಲ್ಲಿ



ತತ್ವಾಭಿಮಾನಿ ದೇವತೆಗಳನ್ನು ಸೇರಿಸಿಕೊಂಡು ಬಹಳಷ್ಟು ಆತ್ಮರಿದ್ದಾರೆ. ಆದರೆ ಇತರರ ಬಗ್ಗೆ ಅಷ್ಟು ತಲೆಕೆಡಿಸಿಕೊಳ್ಳದೆ, ಸಹಜವಾಗಿ ತಿಳಿದಕೊಳ್ಳಲಿಕ್ಕೆ ಬೇಕಾಗಿರತಕ್ಕಂತಹ ಇಬ್ಬರು ಆತ್ಮರು ಯಾರು? ಅಂದರೆ ಒಂದು–ನಾನು ಯಾರು? ಇನ್ನೊಂದು ನನ್ನನ್ನು ನಿಯಂತ್ರಣ ಮಾಡತಕ್ಕಂತಹ ವ್ಯಕ್ತಿ ಯಾರು? ಈ ಎರಡು ಚೇತನರ ಬಗ್ಗೆ ಶಾಸ್ತ್ರದಿಂದಾಗಿ ತಿಳಿದುಕೊಳ್ಳುವುದರಲ್ಲಿ ದಾರಿ ಭ್ರಷ್ಟರಾಗದವರನ್ನು ‘ಪಂಡಿತ’ ಎಂದು ಕರೆದರು. ಶಾಸ್ತ್ರದ ಮೂಲಕವೂ ಕೂಡ ಒಳಗೆ ಇರತಕ್ಕಂತಹ ಚೇತನರನ್ನು ತಿಳಿದುಕೊಳ್ಳಲಿಕ್ಕೆ ತುಂಬಾ ಪ್ರಯತ್ನ ಪಟ್ಟವರಿದ್ದಾರೆ. ಮಧ್ವರು ಬರುವುದಕ್ಕಿಂತ ಮೊದಲು ಬಂದಂತಹ ಅನೇಕ ಆಚಾರ್ಯರು ಶರೀರದಲ್ಲಿ ಸೇರಿರತಕ್ಕಂತಹ ಎರಡು ಚೇತನರನ್ನು ತಿಳಿಯಲು ಪ್ರಯತ್ನ ಮಾಡಿ ದಾರಿ ಭ್ರಷ್ಟರಾದರು. ಆದ್ದರಿಂದ ಅವರನ್ನು ಪಂಡಿತ ಎಂದು ಕರೆಯುವುದಿಲ್ಲ. ಆತ್ಮಜ್ಞಾನವು ಇನ್ನೊಬ್ಬ ಹೇಳುವುದರಿಂದ ಬರದೆ ಶಾಸ್ತ್ರದಿಂದ ಬರತಕ್ಕ ಜ್ಞಾನ ಆಗಿರಬೇಕು. ಧೃತರಾಷ್ಟ್ರ–ಒಬ್ಬ ವ್ಯಕ್ತಿಗೆ ಮುಖ್ಯವಾಗಿ ಬೇಕಾದದ್ದು ಆತ್ಮಜ್ಞಾನ ಯಾವ ವ್ಯಕ್ತಿಯಲ್ಲಿ ಆತ್ಮಜ್ಞಾನವು ಉಂಟೋ ಅವನನೇ ‘ಪಂಡಿತ’ ಎಂದು ಕರೆದರು.

ಇದು ಸಾಮಾನ್ಯವಾಗಿ ಎಲ್ಲಾ ಜೀವರುಗಳಿಗೂ ಸಂಬಂಧಪಟ್ಟದಾಯಿತು. ಇನ್ನು ಕ್ಷತೀಯನಿಗೇನೇ ವಿಶೇಷವಾಗಿ ಸಂಬಂಧಪಟ್ಟ ಗುಣವೆಂದರೆ ‘ಸಮಾರಂಭ’– ಅಂದರೆ ಮುಂದೆ ಹೋಗುವುದು, ಮುಂದೊತ್ತಿ ಹೋಗುವುದು,ಮುಂದೆ ಮುಂದೆ ಹೋಗುವುದು ರಾಜ್ಯಗಳಿಸತಕ್ಕಂತಹ ವಿಷಯದಲ್ಲಿ ಅಥವಾ ಜ್ಞಾನಾರ್ಜನೆ, ವ್ಯಾಪಾರ, ಸೇವೆಯ ವಿಷಯದಲ್ಲಿ ಮುಂದೆ ಹೋಗುವುದು ಆಗಬಹುದು. ಒಬ್ಬ ವ್ಯಕ್ತಿ ತಾನು ಮುಂದೆ ಹೋಗುವುದು ಎಂದಾಗ, ಎಷ್ಟು ಹೋಗಬೇಕು ಅಂದರೆ ವಿದುರ ಅನ್ನುತ್ತಾನೆ–ಧೃತರಾಷ್ಟ್ರ ಮುಖ್ಯವಾಗಿ ಈಗ ನಿನಗೆ ಬೇಕಾದದ್ದು, ಒಬ್ಬ ವ್ಯಕ್ತಿ ತಾನು ಸಮಾಜದಲ್ಲಿ ತನ್ನ ರಾಜ್ಯವನ್ನು ಬೆಳೆಸುವ ಸಲುವಾಗಿ ಎಷ್ಟು ಮುಂದೆ ಹೋಗಬೇಕೆಂದರೆ, ಅವನಿಗೆ ಭುಜಬಲ ಎಷ್ಟು ಇದೆಯೋ ಅಷ್ಟೇ ಮುಂದೆ ಹೋಗಬೇಕು. ಸಮಾರಂಭ ಅಂದರೆ ನಮ್ಮ ಲೋಕದಲ್ಲಿರುವ ಗೌಜಿಗದ್ದಲ್ಲ ಗಲಾಟೆ ಅಲ್ಲದೆ, ‘ಸಮ್ಯಕ್ ಆರಂಭ’. ಸಮ್ಯಕ್ ಅಂದರೆ ಒಳ್ಳೆದು. ಆರಂಭ ಎಂದರೆ ಶುರು ಅಥವಾ ಪ್ರಾರಂಭ. ಒಳ್ಳೆಯ ರೀತಿಯಲ್ಲಿ ಆರಂಭ ಮಾಡುವುದು, ಅಂದರೆ ಮುಂದುವರಿಸಿಕೊಂಡು ಹೋಗುವುದು ಎಂದು ಅರ್ಥ. ಮುಂದುವರಿಸಿಕೊಂಡು
~~~~~~~~~~~~~~~~~~~~~~~~~~~~~~~~~~~~~~~~

ಹೋಗುವಿಕೆ ಎಂದರೆ ಕ್ಷತ್ರಿಯನಾದವನು ತಾನು ರಾಜ್ಯ ಸಂಪಾದನೆಯ ವಿಷಯದಲ್ಲಿ ಮುಂದೆಕ್ಕೆ ಹೋಗುತ್ತಾನೆ.

ಧೃತರಾಷ್ಟ್ರ ಹಿರಿಯರು ಒಂದು ಮಾತು ಹೇಳಿದರು.

**ಅಸಂತುಷ್ಟೋ ದ್ವಿಜೋ ನಷ್ಟಃ ಸಂತುಷ್ಟಸ್ಯ ಕ್ಷತ್ರಿಯ**

ಯಾವ ಬ್ರಾಹ್ಮಣನಿಗೆ ಅಲಂ ಬುದ್ಧಿ ಅಂದರೆ 'ಸಾಕು' ಎಂಬ ಬುದ್ಧಿ ಬಂದಿಲ್ಲ. ಅಂತಹ ಬ್ರಾಹ್ಮಣ ಹಾಳಾದ ಅಂತಾರೆ. ಅವನಿಗೆ 'ಬೇಕು' ಎಂದು ತೋರಬಾರದು. ಸಿಕ್ಕಿದರಲ್ಲಿ ತೃಪ್ತಿ ಪಡೆಯುವುದು ಬ್ರಾಹ್ಮಣನ ಲಕ್ಷಣ. ಕ್ಷತ್ರಿಯನಿಗೆ 'ಸಾಕು' ಎಂಬ ಬುದ್ಧಿ ಬಂದರೆ ಅವನು ಹಾಳಾದ ಎಂದು ಅರ್ಥ. ಅವನಿಗೆ ಸಾಕು ಎಂದು ತೋರಬಾರದು. ಇನ್ನೂ ಬೇಕು-ಬೇಕು ಎಂದು ಹೇಳತಕ್ಕಂತದ್ದು ಕ್ಷತ್ರಿಯನ ಲಕ್ಷಣ. ಬ್ರಾಹ್ಮಣನು ಹೊಟ್ಟೆಪಾಡಿನ ವಿಷಯದಲ್ಲಿ ಸಾಕು ಎನ್ನತಕ್ಕಂತಹ ಬುದ್ಧಿ ಉಳ್ಳವನಾಗಬೇಕಂತೆ. ಕ್ಷತ್ರಿಯನಾದವನು ರಾಜ್ಯ ಬೆಳೆಸುವ ವಿಷಯದಲ್ಲಿ ಬೇಕು ಎಂಬ ಅಪೇಕ್ಷೆ ಪಡುವಂತವನಾಗಬೇಕಂತೆ. ಆದರೆ ಬೇಕು-ಬೇಕು ಎನ್ನತಕ್ಕಂತದ್ದು ಹೇಗೆ ಮುಂದುವರಿಯಬೇಕೆಂದರೆ ಭುಜಬಲ ಎಷ್ಟು ಮತ್ತು ಹೇಗಿದೆಯೋ ಎಂಬುದನ್ನು ಅನುಸರಿಸಿಕೊಂಡು ಇರಬೇಕು. ಕ್ಷತ್ರಿಯ ತಾನು ಮುಂದೆ ಹೋಗಬೇಕು. ಧೃತರಾಷ್ಟ್ರನಿಗೆ ಭುಜದಲ್ಲಿ ಬಲ ಇಲ್ಲದಿರುವಾಗ ರಾಜ್ಯ-ಸಂಪತ್ತು ಬೇಕು ಎಂದು ಅಪೇಕ್ಷೆಪಟ್ಟು ಯಾರು ಯಾರ ಮೇಲೆ ವಿರೋಧ ಕಟ್ಟಿಕೊಂಡು ಅವರ ರಾಜ್ಯ ಕಬಳಿಸುತ್ತಿಯೋ ಇದು ಕ್ಷತ್ರಿಯನಿಗೆ ಹೇಳಿಸಿದ್ದಲ್ಲ. ಅಂದರೆ ಇದರ ಒಟ್ಟು ಅಭಿಪ್ರಾಯ- ಪಾಂಡವರನ್ನು ಎದುರಿಸಲಿಕ್ಕೆ ಬೇಕಾದ ತಾಕ್ಕತ್ತು ನಿನ್ನ ಭುಜದಲ್ಲಿ ಇಲ್ಲ. ಆದರೂ ಅವರ ರಾಜ್ಯವನ್ನು ಕಬಳಿಸಬೇಕೆಂದು ಹೊರಟಿದ್ದಿ ಧೃತರಾಷ್ಟ್ರ. ಇದು ನಿನಗೆ ಶ್ರೇಯಸ್ಸಿಗೆ ಸಾಧನ ಅಲ್ಲ. ಅದರಿಂದ ವ್ಯಕ್ತಿ ತನ್ನ ಭುಜದಲ್ಲಿ ಬಲ ಎಷ್ಟು ಇದೆಯೋ ಎಂದು ನೋಡಿಕೊಂಡು ಮುಂದುವರಿಯಬೇಕು. ಇದನ್ನೇ ಕೃಷ್ಣ ತನ್ನ ಗೀತೆಯಲ್ಲಿ ಹೇಳಿದ್ದಾನೆ. **'ಅತಿ ಸರ್ವತ್ರ ವರ್ಜ್ಯಯೇತ್'** ಎಲ್ಲಿಯೂ ಕೂಡ **'ಅತಿ'** ಆಗಕೂಡದು. ಇಪ್ಪತ್ತನಾಲ್ಕು ಗಂಟೆಯೂ ಜಪ, ಪಾಠ ಹೇಳತಕ್ಕಂತದ್ದು-ಕೇಳತಕ್ಕಂತದ್ದು ಕೂಡದು. ಸ್ವಲ್ಪ ಹೊತ್ತು ಚೆನ್ನಾಗಿ ಕೇಳು. ನಂತರ ಮನನ ಮಾಡು ಅಮೇಲೆ ಅದನ್ನು ಯಾರಿಗಾದರೂ ಹೇಳು ಬಾಕಿ ಸಮಯ ಸ್ವಲ್ಪ ವಿಶ್ರಾಂತಿಗಿರಲಿ.

(ಮುಂದುವರಿಯುತ್ತದೆ)

ಅವನಿಗೆ ಅರ್ಪಿಸಿದ ಪವಿತ್ರಾನ್ನವನ್ನು ಸ್ವೀಕರಿಸಬೇಕು.





# ತೈತ್ತಿರೀಯೋಪನಿಷತ್

ಬರಹ: ಪಿ. ವೆಂಕಟರಮಣ ಆಚಾರ್ಯ, ಉಡುಪಿ ಪ್ರವಚನ:ಬನ್ನಂಜೆ ಗೋವಿಂದಾಚಾರ್ಯ

ಶಬ್ದವನ್ನು ತಿಳಿಯಬೇಕಾದರೆ ಶೀಕ್ಷಾ, ವ್ಯಾಕರಣ, ನಿರುಕ್ತ ಎಂದು ಮೂರು ಶಾಸ್ತ್ರಗಳನ್ನು ಕಲಿಯಬೇಕು. ಇವು ಮೂರು ಶಾಸ್ತ್ರಗಳು ಶಬ್ದವನ್ನು ಹೇಗೆ ಉಚ್ಚರಿಸಿ ಅರ್ಥೈಸಬೇಕು ಎಂದು ಹೇಳಿಕೊಡುತ್ತವೆ.

1) ಶೀಕ್ಷಾ-ಶೀಕ್ಷಾ ಶಾಸ್ತ್ರವು ಶಬ್ದಗಳಲ್ಲಿಯ ವರ್ಣ ಛಂದಸ್ಸಿನ ಉಚ್ಚಾರವನ್ನು ಕಲಿಸಿಕೊಡುತ್ತದೆ. ಇದಕ್ಕೆ ಧ್ವನಿ ಶಾಸ್ತ್ರ ಎಂತಲೂ ಹೆಸರಿದೆ. ಶಬ್ದವನ್ನು ಹೇಗೆ ಉಚ್ಚರಿಸಬೇಕೆಂಬುದೇ ಇದರಲ್ಲಿರುವ ಮುಖ್ಯ ತತ್ವ.

2) ವ್ಯಾಕರಣ-ಸರಿಯಾಗಿ ಉಚ್ಚಾರ ಮಾಡಬೇಕಾದರೆ ಆ ಶಬ್ದದ ರೂಪ ಗೊತ್ತಾಗಬೇಕು. ಇದನ್ನು ವ್ಯಾಕರಣ ಹೇಳಿಕೊಡುತ್ತದೆ.

3) ನಿರುಕ್ತ-ಈ ಶಾಸ್ತ್ರವು ಇಂಥ ಶಬ್ದ ಹೀಗೆ ಉಚ್ಚರಿಸಲ್ಪಟ್ಟದೆ ಈಶಬ್ದಕ್ಕೆ ಇದೇ ಅರ್ಥವನ್ನು ಕಲ್ಪಿಸಬೇಕು ಎಂದು ಹೇಳಿಕೊಡುತ್ತದೆ.

ಶೀಕ್ಷಾ ಶಾಸ್ತ್ರವು ಅರ್ಥದ ವಿಚಾರವನ್ನು ಹೇಳುವದಿಲ್ಲ, ಕೇವಲ ಶಬ್ದದ ವಿಚಾರವನ್ನು ಮಾತ್ರ ಹೇಳುತ್ತದೆ. ವ್ಯಾಕರಣ ಹಾಗೂ ನಿರುಕ್ತ ಶಾಸ್ತ್ರಗಳು ಶಬ್ದದ ಉಚ್ಚಾರ ಹಾಗೂ ಅರ್ಥದ ವಿಚಾರ ಎರಡನ್ನೂ ತಿಳಿಸಿಕೊಡುತ್ತದೆ. ಶೀಕ್ಷಾಶಾಸ್ತ್ರ ಒಂದು ರೀತಿಯ ತರಬೇತಿ ಶಾಸ್ತ್ರ. ಶಿಕ್ಷಣವನ್ನು ಕೊಡುವ ಶಾಸ್ತ್ರ. ಎಲ್ಲಾ ಶಾಸ್ತ್ರಗಳು ಶಿಕ್ಷಣವನ್ನೇ ಕೊಟ್ಟರೂ ಇದನ್ನು ಮಾತ್ರ ಶೀಕ್ಷಾ ಶಾಸ್ತ್ರ ಎಂದು ಹೇಳುತ್ತಾರೆ. ಇದಕ್ಕೆ ಒಂದು ಕಾರಣ ಉಂಟು. ಶೀಕ್ಷಾ ಎಂಬುದು ಕೇವಲ ಶಿಕ್ಷೆ ಅಲ್ಲ. ಅದು ಶೀಕ್ಷಾ ಎಂದು ದೀರ್ಘವಾಗಿ ಎಳೆದು ಹೇಳಿದ್ದಾರೆ. ಅದು ಅಧಿಕವಾದುದು ಅಂದರೆ ಅಧಿಕವಾಗಿ ಉಚ್ಚಾರದ ಬಗ್ಗೆ ಹೇಳುವಂತಾದ್ದು. ಆದ್ದರಿಂದ ಶೀಕ್ಷಾ ಅದು ಅತಿಶಯವಾದುದು. ಆದುದರಿಂದ ಶೀಕ್ಷಾ. ಶಬ್ದದ ಸ್ವರೂಪವನ್ನು ಅತಿಶಯವಾಗಿ ಅಧಿಕವಾಗಿ ಹೇಳಿಕೊಡುತ್ತದೆ. ಆದ್ದರಿಂದ ಶೀಕ್ಷಾ. ಇದನ್ನು ಮೊದಲು ಕಲಿಯಬೇಕು. ಈ ತೈತ್ತರೀಯೋಪನಿಷತ್ತ್ ಪಾಠ ಕೇಳಲಿಕ್ಕೋಸ್ಕರ ಶಿಷ್ಯರೆಲ್ಲ ಬಂದು ಸೇರಿದ್ದಾರೆ. ಅವರಿಗೆ ಗುರುಗಳಾದ ಭೃಗು ಮುನಿಯು ಪಾಠವನ್ನು ಹೇಳಲಿಕ್ಕೆ ಆರಂಭಿಸುತ್ತಾರೆ. ಶೀಕ್ಷಾ ಶಾಸ್ತ್ರವನ್ನು ವಿಶೇಷವಾಗಿ, ವಿಶಿಷ್ಟವಾಗಿ ವೈವಿಧ್ಯವನ್ನು

ಶ್ರೀ ಕೃಷ್ಣನ ಮೂರ್ತಿಯನ್ನು ಸಂದರ್ಶಿಸಬೇಕು.

ಹೇಳುತ್ತೇವೆ. ಇದು ಬಹಳ ಮುಖ್ಯ. ಆದ್ದರಿಂದ ವಿಶೇಷವಾಗಿ ಹೇಳುತ್ತೇವೆ ಎಂದು ಭೃಗು ಹೇಳುತ್ತಾರೆ. ಶೀಕ್ಷಾ ಶಾಸ್ತ್ರವನ್ನು ವಿಶೇಷವಾಗಿ ಹೇಳುತ್ತಿದ್ದೇವೆ ಎಂದು ಬಹುವಚನದಲ್ಲಿ ಯಾಕೆ ಹೇಳಿದರು? ಕೇವಲ ಭೃಗು ಋಷಿ ಮಾತ್ರ ಪಾಠ ಮಾಡುತ್ತಾ ಇರುವದು. ಅನೇಕ ಋಷಿಗಳು ಸೇರಿ ಪಾಠ ಮಾಡುತ್ತಾ ಇದ್ದರೆ ಬಹುವಚನದಿಂದ ಹೇಳಬಹುದಿತ್ತು. ಇಲ್ಲಿ ಯಾಕೆ ಬಹುವಚನ ಹಾಕಿದ್ದಾರೆ? ಏಕವಚನದಲ್ಲೇ ಸಂಭೋಧಿಸಬಹುದು. ಕನ್ನಡದಲ್ಲಿ ಕೆಲವು ಸಲ ತನ್ನನ್ನು 'ನಾವು' ಎಂದು ಸಂಭೋಧಿಸುದುಂಟು. ಸಾಮಾನ್ಯವಾಗಿ ಸಂಸ್ಕೃತದಲ್ಲಿ ಹೀಗೆ ಬಹುವಚನವನ್ನು ಹೇಳುವ ಕ್ರಮ ಇಲ್ಲ. ಆದರೆ ಕೆಲವು ವಿಶೇಷ ಸಂದರ್ಭದಲ್ಲಿ ಬಹುವಚನ ಪ್ರಯೋಗವನ್ನು ಉಪಯೋಗಿಸುವುದುಂಟು. ಗುರುಗಳು ಬಹುವಚನವನ್ನು ಹೇಳುತ್ತಾರೆ. ಗುರುಗಳು ಮಾತಾಡುವಾಗ 'ನಾವು ನಾವು' ಎಂದು ಬಹುವಚನದಲ್ಲಿ ತಮ್ಮನ್ನು ಕರೆದುಕೊಳ್ಳುವುದುಂಟು. ನಾನು ಎಂಬ ಅಹಂಕಾರ ಹೋಗಲಿಕ್ಕೋಸ್ಕರ ಈ ರೀತಿ ಬಹುವಚನವನ್ನು ಹೇಳುತ್ತಾರೆ. ಈ ಕಾರಣದಿಂದಲೇ 'ಭೃಗು' ಶೀಕ್ಷಾಶಾಸ್ತ್ರವನ್ನು ನಾವು ಹೇಳುತ್ತೇವೆ ಎಂದು ಹೇಳಿದ್ದು.

ಶೀಕ್ಷಾಶಾಸ್ತ್ರಕ್ಕೆ 6 ಮುಖಗಳಿವೆ. ಒಬ್ಬ ಒಂದು ಸಭೆಯಲ್ಲಿ, ವೇದಪ್ರವಚನ ಮಾಡುವ ಗುರು ಎಂದು ಕರೆಸಿಕೊಳ್ಳಬೇಕಾದರೆ ಯಾವ ಗುಣಮಟ್ಟ ಇರಬೇಕು? ಅವನಿಗೆ ಪದಕ್ರಮ ಗೊತ್ತಿರಬೇಕು. ಒಂದು ಶಬ್ದ ಎಲ್ಲಿಂದ ಎಲ್ಲಿಯತನಕ ಇರುತ್ತದೆ ಎಂಬ ಜ್ಞಾನ ಇರಬೇಕು. ಅಗ್ನಿಮಿಳೆ ಪುರೋಹಿತಂ ಯಜ್ಞಸ್ಯ..... ಈ ವಾಕ್ಯದಿಂದ ಪ್ರತ್ಯೇಕ ಶಬ್ದವನ್ನು ಗುರುತು ಹಚ್ಚುವ ಸಾಮರ್ಥ್ಯ ಇರಬೇಕು. ಅಗ್ನಿಂ, ಈಳೆ ಪುರೋಹಿತಂ (ಪುರೋಹಿತಂ) ಹೀಗೆ ಪದಚ್ಛೇದ ಮಾಡುವ ರೀತಿ ತಿಳಿದಿರಬೇಕು. ವೇದದ ಅಧ್ಯಯನ ಮೂರು ರೀತಿ ಎಂದು ಹೇಳುತ್ತಾರೆ.

1) ಪ್ರತೃಣ್ಣ ಅಧ್ಯಯನ– ಪದ ಪದ ಬಿಡಿಸಿ ಹೇಳುವುದು. ಅಗ್ನಿಂ ಈಳೆ....

2) ನಿರ್ಭುಜ ಅಧ್ಯಯನ– ಒಟ್ಟೊಟ್ಟಿಗೆ ಸೇರಿಸಿ ಹೇಳುವುದು. ಅಗ್ನಿ ಮೀಳೆ, ಪುರೋಹಿತಂ ಹಿಗೆ ಒಟ್ಟೊಟ್ಟಿಗೆ ಓದುವುದು.

3) ಉಭಯಂ ಅಂತರೇಣ ಅಧ್ಯಯನ– ಎರಡೆರಡನ್ನು ಒಟ್ಟಿಗೆ ಹೇಳುವಂಥಾದ್ದು. ಅಗ್ನಿಮೀಳೆ, ಪುರೋಹಿತಂ, ಪುರೋಹಿತಂ ಯಜ್ಞಸ್ಯ..... ಈ ಮೂರು ವಿಭಾಗಗಳನ್ನು ಸಹ ಪ್ರಕೃತಿ ಪಾಠ ಎಂದು ಹೇಳುತ್ತಾರೆ. ಇನ್ನು ವಿಕೃತಿ ಪಾಠ ಎಂದು ಬೇರೆ ಇದೆ. ಅದು ಘನ, ಜಟೆ ಎಂದು ಶಬ್ದಗಳನ್ನು ಮುಂದೆ ಹಿಂದೆ ಮಾಡಿ ಹಲವು ರೀತಿಯಲ್ಲಿ ಹೇಳುತ್ತಾರೆ. ಹೀಗೆ ಸಂಹಿತಾ ಪಾಠ, ಪದಪಾಠ, ಕ್ರಮಪಾಠ ಎಂದು ಹಲವು ವಿಧಾನಗಳು ಯಾಕೆ? ಇದರಿಂದ ಏನು ಫಲ? ಸಂಹಿತಾ ಪಾಠದಿಂದ ಅನ್ನ ಸಿಗುತ್ತದೆ. ಎರಡನೆಯದರಿಂದ ಸ್ವರ್ಗ ಹಾಗೂ ಮೂರನೆಯದರಿಂದ ಅನ್ನ ಸ್ವರ್ಗ ಎರಡು ಸಿಗುತ್ತದೆ. **(ಮುಂದುವರಿಯುವುದು)**

**ಪ್ರತಿದಿನ ಆತನನ್ನು ಪೂಜಿಸಬೇಕು**



**ಮುಖಪುಟಲೇಖನ**

# ಶ್ರೀಪಾದರಾಜರು

–ಶ್ರೀನಿವಾಸ ಭಟ್ಟ

ಶ್ರೀಪಾದರಾಜರು ಪ್ರಾತಃ ಸ್ಮರಣೀಯರು. ಇವರು ಹುಟ್ಟಿದ ಊರು ಚೆನ್ನಪಟ್ಟಣ ತಾಲೂಕಿನ ಅಬ್ಬೂರು ಎಂಬ ಗ್ರಾಮ. ಇವರ ಪೂರ್ವಾಶ್ರಮದ ತಂದೆ ಶೇಷಗಿರಿ ಆಚಾರ್ಯರು. ತಾಯಿ ಗಿರಿಯಮ್ಮ. ಇವರ ಪೂರ್ವಾಶ್ರಮದ ಹೆಸರು ಲಕ್ಷ್ಮೀನಾರಾಯಣ ಎಂದು. ಇವರು 1402ರಲ್ಲಿ ಜನಿಸಿದರು ಎಂಬ ಪ್ರತೀತಿಯಿದೆ. ಇವರು ತಮ್ಮ 10ನೇಯ ವಯಸ್ಸಿನಲ್ಲಿ ಅಂದರೆ 1412ರಲ್ಲಿ ಶ್ರೀ ಸ್ವರ್ಣವರ್ಣತೀರ್ಥರಿಂದ ಸಂನ್ಯಾಸಾಶ್ರಮ ಸ್ವೀಕಾರ ಮಾಡಿದರು. ಸನ್ಯಾಂಸಾಶ್ರಮದ ನಂತರ ಶ್ರೀಲಕ್ಷ್ಮೀನಾರಾಯಣತೀರ್ಥರಾದರು. ನಂತರ ವಿಭುದೇಂದ್ರರಲ್ಲಿ ವೇದವೇದಾಂಗ ಅಧ್ಯಯನವನ್ನು ನೆರವೇರಿಸಿದರು.

ಶ್ರೀಸ್ವರ್ಣವರ್ಣತೀರ್ಥರು ಆದ್ಯಸ್ವಯಂವ್ಯಕ್ತಕ್ಷೇತ್ರವಾದ ಶ್ರೀರಂಗಂನಲ್ಲಿ ನೆಲೆಸಿದ್ದರಿಂದ ಶಿಷ್ಯರಾದ ಶ್ರೀಲಕ್ಷ್ಮೀನಾರಾಯಣತೀರ್ಥರೂ ಅವರ ಜೊತೆಯೇ ನೆಲೆಸಿದ್ದರು. ಶ್ರೀಸ್ವರ್ಣವರ್ಣತೀರ್ಥರು ಶ್ರೀಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯರಾದ ಶ್ರೀಪದ್ಮನಾಭತೀರ್ಥರ ಪರಂಪರೆಯಲ್ಲಿ ಏಳನೇಯವರು. ಶ್ರೀಸ್ವರ್ಣವರ್ಣತೀರ್ಥರು ವೃಂದಾವನಸ್ಥರಾದ ನಂತರ ಮಠಾಧಿಪತ್ಯವು ಶ್ರೀಲಕ್ಷ್ಮೀನಾರಾಯಣತೀರ್ಥರ ಪಾಲಾಯಿತು. ಇವರ ಪಾಂಡಿತ್ಯಕ್ಕೆ ಒಲಿದು ಬಂದ ಬಿರುದು 'ಶ್ರೀಪಾದರಾಜರು' ಎಂದು. ಆದ್ದರಿಂದ ಇವರು ಶ್ರೀಪಾದರಾಜರು ಎಂದೇ ಪ್ರಸಿದ್ಧರಾಗಿದ್ದಾರೆ.

**ಜ್ಞಾನವೈರಾಗ್ಯಭಕ್ತ್ಯಾದಿ ಕಲ್ಯಾಣಗುಣಶಾಲಿನಃ**
**ಲಕ್ಷ್ಮೀನಾರಾಯಣಮುನೀನ್ ವಂದೇ ವಿದ್ಯಾಗುರೂನ್ ಮಮ॥**

ಎಂದು ಚಂದ್ರಿಕಾ ಗ್ರಂಥದ ಆದಿಯಲ್ಲಿ ಶ್ರೀವ್ಯಾಸರಾಜರು ಮಾಡಿದ ಗುರುವಂದನೆ ಇವರ ಪಾಂಡಿತ್ಯಾದಿಗಳಿಗೆ ಹಿಡಿದ ಕೈಗನ್ನಡಿಯಾಗಿದೆ. ಪ್ರಕಾಂಡ ಪಂಡಿತರಾದ ವ್ಯಾಸರಾಜರಿಗೆ ವಿದ್ಯಾಗುರುಗಳಾದ್ದರಿಂದ ಇವರ ಜ್ಞಾನದ ಅಗಾಧತೆಯನ್ನು ತಿಳಿಯಬಹುದಾಗಿದೆ. ತಮಗೆ ಒಲಿದು ಬಂದಿದ್ದ ತಿರುಪತಿ ಶ್ರೀನಿವಾಸ ಪೂಜೆಯ ಸುವರ್ಣಾವಕಾಶವನ್ನು ಶಿಷ್ಯ ಪ್ರೀತಿಯಿಂದ ಶ್ರೀವ್ಯಾಸರಾಜರಿಗೆ ಬಿಟ್ಟು ಕೊಟ್ಟದ್ದರಿಂದ ಅವರ ವೈರಾಗ್ಯವನ್ನು ತಿಳಿಯಬಹುದಾಗಿದೆ. ಭಗವಂತನ ಭಕ್ತಿಯನ್ನು ಅವರು ರಚಿಸಿರುವ ಕೀರ್ತನೆಗಳು ಉಗಾಭೋಗಗಳು, ಸುಳಾದಿಗಳಿಂದ ತಿಳಿಯಬಹುದಾಗಿದೆ. ಇವರ ಪರಂಪರೆಯಲ್ಲಿ

**(....22....ನೇ ಪುಟದಲ್ಲಿ)**

**ಕೃಷ್ಣನ ಪಾದದ ತುಳಸಿಯನ್ನು ಆಘ್ರಾಣಿಸಬೇಕು.**

# ಹಿಂಸಾನಂದ ತರವಲ್ಲ

–ವಿ॥ ರಾಮವಿಟ್ಠಲಾಚಾರ್ಯ ಬೆಂಗಳೂರು

ಜನಮೇಜಯನು ತನ್ನ ಸಹೋದರರೊಂದಿಗೆ ಕುರುಕ್ಷೇತ್ರದಲ್ಲಿ ದೀರ್ಘಕಾಲದ ಜ್ಞಾನಸತ್ರವನ್ನು ಕೈಗೊಂಡನು. ಶ್ರುತಸೇನ, ಉಗ್ರಸೇನ, ಭೀಮಸೇನ ಎಂದು ಜನಮೇಜಯನ ಮೂರು ಮಂದಿ ತಮ್ಮಂದಿರು. ಅವರು ಸತ್ರದಲ್ಲಿ ಉಪಾಸೀನರಾಗಿರುವಾಗ ನಾಯಿಯೊಂದು ಬಂತು. ಜನಮೇಜಯನ ಅನುಜರು ಹೊಡೆದು ಓಡಿಸಿದರು. ನೋವಿನಿಂದ ಬೊಬ್ಬಿಡುತ್ತ ನಾಯಿ ತನ್ನ ತಾಯಿ ಬಳಿಗೆ ಹೋಯಿತು. ಜನಮೇಜಯನ ತಮ್ಮಂದಿರು ನನ್ನನ್ನು ಹೊಡೆದರೆಂದು ದೂರಿತ್ತಿತು. ತಾಯಿ ಸರಮೆ ನುಡಿದಳು ನೀನೇನೋ ತಪ್ಪು ಮಾಡಿರಬೇಕು. ಮರಿ ಹೇಳಿತು– ನಾನೇನೂ ತಪ್ಪು ಮಾಡಲಿಲ್ಲಮ್ಮ. ಹವಿಸ್ಸನ್ನು ನೋಡಲಿಲ್ಲ. ನೆಕ್ಕಲಿಲ್ಲ. ಸುಮ್ಮನೆ ಹೊಡೆದರು.

ತಾಯಿನಾಯಿ ಸತ್ರದ ಬಳಿಗೆ ಬಂದು ನನ್ನ ಪುತ್ರ ಹವಿಸ್ಸನ್ನು ನೋಡಲಿಲ್ಲ. ನೆಕ್ಕಲಿಲ್ಲ. ನಿರಪರಾಧಿ. ಅವನನ್ನು ಏಕೆ ಹೊಡೆದಿರಿ? ಎಂದು ಕೇಳಿತು. ಜನಮೇಜಯನ ಸಹೋದರರು ಏನೂ ಮಾತನಾಡಲಿಲ್ಲ. ಅವರ ಮೌನ ತಪ್ಪನ್ನು ಸಾಬೀತುಪಡಿಸುತ್ತಿತ್ತು. ನಾಯಿ ಸರಮೆ ಪುತ್ರಶೋಕಾರ್ತಳಾಗಿ, ಯಾವ ಅಪಕಾರವನ್ನೂ ಎಸಗದ ನನ್ನ ಮಗನನ್ನು ಹೊಡೆದು ಹಿಂಸೆಗೊಳಿಸಿದ್ದೀರಿ. ಸದ್ಯದಲ್ಲಿಯೇ ನಿಮಗೆ ಮಹಾಭಯ ಬಂದೊದಗುತ್ತದೆ. ಎಂದು ಶಾಪವಿತ್ತಿತು. ಜನಮೇಜಯ ಶಾಪದಿಂದ ಆತಂಕಕ್ಕೊಳಗಾದನು. ಸತ್ರ ಮುಗಿಯುತ್ತಿದ್ದಂತೆ ತನ್ನ ಪಾಪವನ್ನು ಪರಿಹರಿಸಬಲ್ಲ ಅನುರೂಪ ಪುರೋಹಿತರನ್ನು ಹುಡುಕುತ್ತ ಹಸ್ತಿನಪುರಕ್ಕೆ ತೆರಳಿದನು.

ಒಮ್ಮೆ ಬೇಟೆಗೆಂದು ಹೊರಟಿದ್ದ ಜನಮೇಜಯ ತನ್ನ ಊರಿನಲ್ಲಿಯೇ ಆಶ್ರಮವೊಂದನ್ನು ಕಂಡು ಕುತೂಹಲದಿಂದ ಒಳಹೊಕ್ಕಿದನು. ಶ್ರುತಶ್ರವ ಎಂಬ ಋಷಿ ಹಾಗೂ ಅವರ ಪುತ್ರ ಸೋಮಶ್ರವನೆಂಬ ತಪೋನಿರತ ಮುನಿಯನ್ನು ಕಂಡನು.



ಋಷಿಗಳೇ! ತಮ್ಮ ಮಕ್ಕಳಾದ ಈ ಸೋಮಶ್ರವರನ್ನು ಪೌರೋಹಿತ್ಯಕ್ಕೆ ಕಳುಹಿಸಿಕೊಡಿ. ಪ್ರಾಯಶ್ಚಿತ್ತ ಆಚರಣೆಯಿಂದ ಶಾಪವನ್ನು ಉಪಶಮನ ಮಾಡಿಸಲಿ. ಶ್ರುತಶ್ರವರಲ್ಲಿ ಮೊರೆಯಿಟ್ಟನು.

ಋಷಿಗಳು ಹೇಳಿದರು–ಜನಮೇಜಯ! ನನ್ನ ವೀರ್ಯವನ್ನು ಕುಡಿದ ಸರ್ಪಿಣಿಯಲ್ಲಿ ಹುಟ್ಟಿದ ಮಗನಿವನು. ಮಹಾತಪಸ್ವೀ. ಶಾಸ್ತ್ರಾಧ್ಯಾಯನ ಸಂಪನ್ನ. ರುದ್ರದೇವರು ಪ್ರಯೋಗಿಸುವ ಕೃತ್ಯೆಯನ್ನು ಹೊರತು ಮತ್ತ್ಯಾವ ಪಾಪಕೃತ್ಯವೇ ಇರಲಿ ಅದನ್ನು ಪರಿಹರಿಸಬಲ್ಲವ. ಇವನದೊಂದು ಗೂಢವ್ರತವಿದೆ. ಯಾರೋ ಬ್ರಾಹ್ಮಣ ಏನೇ ಕೇಳಿದರೂ ಅದನ್ನು ಅವರಿಗೆ ಕೊಡುವ ವ್ರತವದು. ಆ ವ್ರತವನ್ನು ನೆರವೇರಿಸಿ ಕೊಡುವುದಾದರೆ ಅವಶ್ಯವಾಗಿ ಕರೆದುಕೊಂಡು ಹೋಗಬಹುದು. ಅವರ ಕರಾರಿಗೆ ಒಪ್ಪಿ ಜನಮೇಜಯ ಪೂಜ್ಯ ಸೋಮಶ್ರವರನ್ನು ಕರೆದುಕೊಂಡು ಹೋದ. ತಮ್ಮಂದಿರಿಗೆ ಹೇಳಿದ ಈ ಮಹಾನುಭಾವ ಸೋಮಶ್ರವರನ್ನು ಪುರೋಹಿತರನ್ನಾಗಿ ಕರೆದುಕೊಂಡು ಬಂದಿದ್ದೇವೆ. ಅವರು ಏನು ಹೇಳಿದರೂ ಅದನ್ನು ನಡೆಸಿಕೊಡಿರಿ. ಅನುಜರೆಲ್ಲ ಹಾಗೇ ಆಗಲೆಂದು ಒಪ್ಪಿದರು. ಸೋಮಶ್ರವರು ಪ್ರಾಯಶ್ಚಿತ್ತ ಮಾಡಿಸಿ ಪಾಪಕಳೆದರು.

ನಿರಪರಾಧಿ ನಾಯಿಯೊಂದನ್ನು ಪವಿತ್ರ ಸತ್ರಸ್ಥಳದಲ್ಲಿ ಬಂತೆಂದು ಹೊಡೆದು ಹಿಂಸೆಗೊಳಿಸಿದ ಜನಮೇಜಯನ ಸಹೋದರರು ಸಲ್ಲುವ ಪುರೋಹಿತರನ್ನು ಹುಡುಕಿ ತಂದು ಅವರ ವ್ರತವನ್ನು ನೆರವೇರಿಸಿ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾಯಿತು.! ನಾವೆಷ್ಟು ನಿರಪರಾಧಿ ಪ್ರಾಣಿಗಳಿಗೆ ಹಿಂಸೆ ಕೊಡುತ್ತಿರುತ್ತೇವೆ.! ನಮ್ಮ ಪಾಪಕ್ಕೆ ಕೊನೆಯೆಲ್ಲಿ?

ರಸ್ತೆಯಲ್ಲಿ ಸುಮ್ಮನೆ ಮಲಗಿರುವ ಅಥವಾ ಓಡಾಡಿಕೊಂಡಿರುವ ನಾಯಿಗಳಿಗೆ ಕಲ್ಲು ಹೊಡೆದು ಅದು ಹೆದರಿ ಓಡುವುದನ್ನು ನೋಡಿ ಮೋಜು ಪಡುತ್ತೇವೆ. ಮತ್ತೊಂದು ಪ್ರಾಣಿಗೆ ಹಿಂಸೆಕೊಟ್ಟು ಖುಷಿ ಪಡುವುದು ಎಂತಹ ಕೆಟ್ಟ ವ್ಯಕ್ತಿತ್ವ! ಕೆಲವೊಮ್ಮೆ ನಿರಪರಾಧಿಗಳಾಗಿಯೂ ದಂಡನೆಗೆ ಒಳಗಾಗುವ ಪ್ರಸಂಗಗಳು ನಮ್ಮ ಜೀವನದಲ್ಲಿ ಬಂದಿದ್ದರೆ ಅವು ಇಂತಹ ಹಲವು ಪಾಪಗಳ ಫಲವಿರಬಹುದಲ್ಲವೇ? ರಸ್ತೆಯಲ್ಲಿ ನಾಯಿಯನ್ನು ಕಂಡಾಗ ನಾಯಿರೂಪದಿಂದ ವಾಯುದೇವರು ದೇವತೆಗಳಿಗೆ ತತ್ತ್ವೋಪದೇಶಮಾಡಿದ ಉಪನಿಷತ್ತಿನ ಸಂದರ್ಭವನ್ನು ನೆನೆದು ಪುಣ್ಯಭಾಗಿಗಳಾಗಬಹುದಲ್ಲವೆ? ನಾಯಿಗೆ ನಮ್ಮಿಂದ ಭಯವಾಗದಂತೆ ನಡೆದು ಆ ಅಭಯದಾನ ನಾಯಿಯೊಳಗಿರುವ ಭಗವಂತನಿಗೆ ಅರ್ಪಿಸಬಹುದಲ್ಲವೇ? ನಾಯಿಗೆ

(.30...ನೇ ಪುಟದಲ್ಲಿ)

# ಶ್ರೀಹರಿಭಕ್ತಿಸಾರ

–ವಿ॥ ಹಯವದನ ಪುರಾಣಿಕ, ತಿರುಪತಿ

**ಈಗಲೋ ಈ ದೇಹ ವಿನ್ನಾ**
**ವಾಗಲೋ ನಿಜವಲ್ಲವೆಂಬುದ**
**ನೀಗ ತಿಳಿಯದೆ ಮಡದಿ ಮನೆ ಮನೆವಾರ್ತೆಎಂದೆನುತಾ**
**ರಾಗಲೋಭದಿ ಮುಳುಗಿ ಮುಂದಣ**
**ತಾಗುಬಾಗುಗಳರಿಯೆ ನಿನ್ನ ಸ**
**ಮಾಗಮವ ಬಯಸುವೆನು ರಕ್ಷಿಸು ನಮ್ಮನನವರತ ॥೫೫॥**

ನನ್ನ ಈ ದೇಹ ಈಗಲೋ ಇನ್ನಾವಾಗಲೋ ನಶಿಸುವಂಥದ್ದು ಹೊರತು ಶಾಶ್ವತವಲ್ಲ ಎಂಬುದನ್ನು ನಾನು ಅರಿತುಕೊಳ್ಳಬೇಕಾಗಿತ್ತು. ಅರಿತುಕೊಳ್ಳದೆ ಈಗ ಮನೆ ಮಡದಿ ಮನೆ ವಾರ್ತೆ ಎಂದೆನ್ನುತ್ತ ರಾಗ ಲೋಭಗಳಲ್ಲಿ ಮುಳುಗಿ ಮುಂದೆ ಬದುಕಿನಲ್ಲಿ ಆಗಬಹುದಾದ  ಘರ್ಷಣೆಗಳು ಅವನತಿಗಳ ಬಗ್ಗೆ ಯೋಚನೆಯನ್ನೇ ಮಾಡದಿದ್ದೇನೆ. ಅದರಿಂದ ವಿವೇಕವೈರಾಗ್ಯಗಳಿಗಾಗಿ ನಾನು ನಿನ್ನ ಸಮಾಗಮವನ್ನೇ ಬಯಸುತ್ತೇನೆ.

## ಈಗಲೋ ಈ ದೇಹ ಇನ್ನಾವಗಲೋ, ನಿಜವಲ್ಲ

**ಅಜರಾಮರವತ್ ಪ್ರಾಜ್ಞೋ ವಿದ್ಯಾಮರ್ಥಂ ಚ ಸಾಧಯೇತ್ ।**
**ಗೃಹೀತ ಇವ ಕೇಶೇಷು ಮೃತ್ಯುನಾ ಧರ್ಮಮಾಚರೇತ್ ॥**

ಜ್ಞಾನಸಂಪಾದನೆ ಮಾಡುವಲ್ಲಿ ಮತ್ತು ಮೋಕ್ಷವೆಂಬ ದೈವೀಸಂಪತ್ತನ್ನು ಸಾಧಿಸಿಕೊಳ್ಳುವಲ್ಲಿ 'ನನಗೆ ಮುಪ್ಪಿಲ್ಲ, ಸಾವಿಲ್ಲ' ಎಂದುಕೊಳ್ಳುತ್ತಿರಬೇಕು. 'ಜ್ಞಾನ ಮೋಕ್ಷಗಳು ತಕ್ಷಣ ಸಿಗಲಿಲ್ಲ, ನಾನು ಮಾಡುವ ಪ್ರಯತ್ನ ವ್ಯರ್ಥ' ಎಂದುಕೊಳ್ಳದೆ, 'ನನ್ನ ಯತ್ನಕ್ಕೆ ಫಲ ತಕ್ಷಣದಲ್ಲಿ ಸಿಗದೆ ಇದ್ದರೂ ಮುಂದೆ ಎಂದಾದರೂ ಸಿಕ್ಕೇ ಸಿಗುತ್ತದೆ.



ಅಂದಿನವರೆಗೆ ನಾನು ಬದುಕಿರುತ್ತೇನೆ. ನನಗೆ ಮುಪ್ಪಿಲ್ಲ ಸಾವಿಲ್ಲ' ಎಂದೇ ಒಮ್ಮನಸಿನಿಂದ ಯತ್ನಮಾಡಬೇಕು. ಧರ್ಮಾಚರಣೆಯಲ್ಲಿ ತೊಡಗುವಾಗ ಮಾತ್ರ ಹೆಡತಲೆಯ ಮೃತ್ಯು ನನ್ನ ಜುಟ್ಟುಹಿಡಿದು ಸೆಳೆಯಲು ಸಿದ್ಧಳಾಗಿ ನಿಂತಿದ್ದಾಳೆ ಎಂಬ ಭಾವನೆ ಬೇಕು. ನಾಳೆ ನಾಳೆ ಎಂದು ಧರ್ಮಾಚರಣೆಯನ್ನು ಮುಂದೂಡಬಾರದು. ನಾಳೆ ನಾನೇ ಇಲ್ಲವಾದೇನು, ಇದ್ದರೂ ಮುಪ್ಪಿನಿಂದ ಅಶಕ್ತನಾದೇನು, ಇಂದೇ ಧರ್ಮಾಚರಣೆ ಮಾಡುತ್ತೇನೆ ಎಂದುಕೊಳ್ಳಬೇಕು.

## ಮಡದಿ ಮನೆ ಮನೆವಾರ್ತೆ ಎಂದೆನುತ

ಶ್ರೀಹರಿ ನಾನು ನಿನ್ನ ಬಗ್ಗೆ ಅಲೋಚಿಸುವುದನ್ನು ಬಿಟ್ಟಿದ್ದರಿಂದ, ಒಳ್ಳೆಯ ಅಲೋಚನೆಯಿಲ್ಲದ ಮನಸ್ಸು ಕೆಟ್ಟ ಅಲೋಚನೆಗಳಿಗೇ ಆದರವಾಗುವುದರಿಂದ, ಮಡದಿ ಮನೆ ಮನೆವಾರ್ತೆಗಳಿಗೆ ಆದ್ಯತೆ ನೀಡಿ ರಾಗಲೋಭ ಮುಂತಾದ ದೋಷಗಳಿಗೆ ಪಕ್ಕಾದೆ, ಕೆಟ್ಟ ಅಲೋಚನೆಗಳಿಗೇ ಮನಸ್ಸನ್ನು ಹರಿಯಲು ಬಿಟ್ಟೆ.

## ಮುಂದಣತಾಗು ಬಾಗುಗಳರಿಯೆ

ಮಾರಿ ಹಬ್ಬದ ಕುರಿಯು ತೋರಣವ ಮೆಲುವಂತೆ, ಮರುಕ್ಷಣದಿ ಕುರಿ ಮಾರಿಗೆ ಬಲಿಯಾಗುತ್ತಿದೆ. ಅದನ್ನರಿಯದೆ ಮಾರಿಹಬ್ಬಕ್ಕೆ ಕಟ್ಟಿದ್ದ ತೋರಣವನ್ನು ಮೆಲ್ಲಲು ಕುರಿ ಯತ್ನಿಸುತ್ತದೆ. ಪಾರಮಾರ್ಥಿಕ ಜೀವನದಲ್ಲಿ ಮುಂದೆ ಬರಲಿರುವ ನಾನಾ ಬಗೆಯ ಘರ್ಷಣೆಗಳು ತಿಕ್ಕಾಟಗಳು ಅಧಃಪಾತಗಳು ನರಕಾದಿ ಅನರ್ಥಗಳು ಇವಾವುದರ ಅರಿವೂ ಇಲ್ಲದೆ ಮಡದಿ ಮನೆ ಮನೆವಾರ್ತೆಗಳು ಮುಂತಾಗಿ ಕ್ಷಣಿಕಸುಖ ಸಂಪಾದನೆಗೆ ನಾನು ಯತ್ನಿಸುತ್ತೇನೆ.

## ನಿನ್ನ ಸಮಾಗಮವ ಬಯಸುವೆನು

**'ಅಮೃತಂಕ್ಷೇಮಮಭಯಂ'** ಮರಣವಿಲ್ಲದ, ಸುಖಮಯವಾದ, ಭಯರಹಿತವಾದ ತಾಣವೆಂದರೆ ಅದು ನಿನ್ನ ಪಾದ ಒಂದೇ. ಅದರ ಸಮಾಗಮವೆನಗೆ ಆಗಲೆಂದು ಬಯಸುತ್ತೇನೆ. ಅದಾಗದಿದ್ದರೆ ನಾನೆಷ್ಟು ಯತ್ನಿಸಿದರೂ ನನ್ನ ಕಣ್ಣು ಮೈಮನಗಳು ಕ್ಷಣಿಕ ಸುಖಭೋಗದಾಕರ್ಷಣೆಯಿಂದ ಮುಕ್ತವಾಗಿ ಈಚೆಗೆ ಬರಲಾರವು. ನಿನಗೆ ಅರ್ಪಿತವಾದ

ಪವಿತ್ರವಾದ ಭೋಗಭಾಗ್ಯಗಳನ್ನೇ ಉಂಡು ನನ್ನ ಮೈಮನಗಳು ಪಾವನವಾದಾಗಲೇ ವಿವೇಕ ಮೂಡೀತು, ವೈರಾಗ್ಯ ಬಂದೀತು.

### ರಕ್ಷಿಸು ನಮ್ಮನನವರತ

ಬದುಕಿರುವವರೆಗೂ ಉಣಲು ನೀಡಿದರೆ ಅದು ರಕ್ಷಣೆ ಎನಿಸದು. ಆ ರಕ್ಷಣೆ ರಕ್ಷಣೆಯಲ್ಲ, ಬದುಕು ಬದುಕಲ್ಲ. ರಾಗಲೋಭಗಳಿಂದ ಮುಕ್ತವಾದ ವಿವೇಕ ವೈರಾಗ್ಯಗಳಿಂದ ಶ್ರೀಮಂತವಾದ ಬದುಕೇ ಬದುಕು. ನಿನ್ನ ರಕ್ಷಣೆಯಲ್ಲಿ ನಾವು ಅಂಥ ಬದುಕನ್ನು ನಡೆಸುವಂತಾಗಬೇಕು. ★

## ಹುಬ್ಬಳ್ಳಿಯಲ್ಲಿ ಶ್ರೀವೇದವ್ಯಾಸಜಯಂತಿ ಹಾಗೂ ಶ್ರೀವಿದ್ಯಾಮಾನ್ಯರ ಆರಾಧನೆ

ಬೆಂಗಳೂರಿನ ಭಾಗವತನಿಕೇತನ ಹಾಗೂ ಶ್ರೀವೇದವ್ಯಾಸ ಜಯಂತಿ – ಶ್ರೀವಿದ್ಯಾಮಾನ್ಯಾರಾಧನಾ ಸಮಿತಿ, ಹುಬ್ಬಳ್ಳಿ, ಇವರ ಸಂಯುಕ್ತಾಶ್ರಯದಲ್ಲಿ ಭಂಡಾರಕೇರಿಮಠದ ಶ್ರೀವಿದ್ಯೇಶತೀರ್ಥರ ನೇತೃತ್ವದಲ್ಲಿ 13–05–2008ರಿಂದ 18–05–2008ರವರೆಗೆ ಹುಬ್ಬಳ್ಳಿ ವಿದ್ಯಾನಗರದ ಸುಧನ್ವಸಭಾಮಂಟಪದಲ್ಲಿ ಶ್ರೀವೇದವ್ಯಾಸಜಯಂತಿ ಹಾಗೂ ಶ್ರೀವಿದ್ಯಾಮಾನ್ಯಗುರುಗಳ ಎಂಟನೆಯ ಮಹಾರಾಧನೆ ತುಂಬಾ ವೈಭವದಿಂದ ನಡೆಯಿತು.

15–05–2008ರಂದು ಬೆಳಗ್ಗಿನಿಂದ ರಾತ್ರಿಯವರೆಗೆ ಹನ್ನೆರಡು ವಿದ್ವಾಂಸರಿಂದ ಭಾಗವತದ ಹನ್ನೆರಡು ಸ್ಕಂಧಗಳ ಬಗ್ಗೆ ಹಾಗೂ ಮತ್ಸ್ಯಾದಿ ಭಗವದ್ರೂಪಗಳ ಬಗ್ಗೆ ನಿರಂತರ ಪ್ರವಚನಗಳು ನಡೆದವು. ಶ್ರೀಪೇಜಾವರ ಶ್ರೀಪಾದರಿಗೆ ತುಲಾಭಾರ ಪೂರ್ವಕ ಗುರುನಮನ ನಡೆಯಿತು. ಶ್ರೀವಿದ್ಯಾಮಾನ್ಯತೀರ್ಥರ ಶಿಷ್ಯರಾದ ಶ್ರೀರಾಘವೇಂದ್ರಾಚಾರ್ಯ ಗಂಗೂರ್ ಇವರಿಗೆ 'ಶ್ರೀಭಂಡಾರಕೇರಿರಾಜಹಂಸ' ಎಂಬ ಪ್ರಶಸ್ತಿಯನ್ನೂ, ಶ್ರೀ ಡಿ.ರಾಮಾಚಾರ್ಯ ಇವರಿಗೆ 'ಶ್ರೀವಿದ್ಯಾಮಾನ್ಯವಿಜ್ಞಾನಭಾಸ್ಕರ' ಪ್ರಶಸ್ತಿಯನ್ನೂ ನೀಡಿ ಸಮ್ಮಾನಿಸಲಾಯಿತು. ಶ್ರೀವೇದವ್ಯಾಸಜಯಂತಿಯಂದು ಬೆಳಿಗ್ಗೆ ಶ್ರೀವೇದವ್ಯಾಸಮಂತ್ರದಿಂದ ಹೋಮವೂ ಸಂಜೆ ವೇದವ್ಯಾಸ ಹಾಗೂ ಶ್ರೀವಿದ್ಯಾಮಾನ್ಯತೀರ್ಥರ ಭಾವಚಿತ್ರದ ಶೋಭಾಯಾತ್ರೆಯೂ ನಡೆಯಿತು.

ನ್ಯಾಯಮಾರ್ಗದಿಂದ ಹಣ ಗಳಿಸಿರಿ, ನೀಚಮಾರ್ಗ ಬೇಡ.





# ಅಸಾರ ಸಂಸಾರ

–ಡಾ। ಎನ್. ವೆಂಕಟೇಶ ಆಚಾರ್ಯ, ಬೆಂಗಳೂರು

*(ಹಿಂದಿನ ಸಂಚಿಕೆಯಿಂದ ಮುಂದುವರಿದುದು..........)*

**ದೇವೈರತ್ರಾಪಿ ವಿಚಿಕಿತ್ಸಿತಂ ಕಿಲ**
**ತ್ವಂ ಚ ಮೃತ್ಯೋ ಯನ್ನ ಸುಜ್ಞೇಯಮಾತ್ಥ**
**ವಕ್ತಾ ಚಾಸ್ಯ ತ್ವಾದೃಗನ್ಯೋ ನ ಲಭ್ಯೋ**
**ನಾನ್ಯೋ ವರಸ್ತುಲ್ಯ ಏತಸ್ಯ ಕಶ್ಚಿತ್**

ದೇವತೆಗಳಿಂದಲೂ ಈ ವಿಷಯದಲ್ಲಿ ಚರ್ಚಿಸಲ್ಪಟ್ಟಿದೆಯಲ್ಲವೆ? ಎಲೈ ಮೃತ್ಯುವೇ ನೀನು ಸಹ ಇವನನ್ನು ಸುಜ್ಞೇಯನಲ್ಲ ಎಂದು ಬಣ್ಣಿಸಿರುವೆ ಎಂದ ಮೇಲೆ ಇದು ಅತಿಗಹನ. ಇದರ ಬಗ್ಗೆ ಹೇಳುವವನು ನಿನ್ನನ್ನು ಬಿಟ್ಟು ಬೇರೆಯವರು ಯಾರೂ ಸಿಗರು. ಆದ್ದರಿಂದ ಇದಕ್ಕೆ ಸಮಾನವಾದ ಬೇರೆ ವರ ಇಲ್ಲ. (ಎಂಬುದು ನನ್ನ ಇಂಗಿತ)

1. ಕೆಲವರು ಹಣಕ್ಕಾಗಿ ಕಡೆಗೆ ಪ್ರಾಣಕ್ಕಾಗಿ ತತ್ವಜ್ಞಾನ ಕೈಬಿಡುವವರು. ಅವರಿಗೆ promise ಗಿಂತ compromise ಪ್ರಮುಖ. ಆದರೆ ನಚಿಕೇತ ಮೃತ್ಯುವಿರಲಿ. ಮೃತ್ಯುವಿನ ದೇವತೆಯ ಬಳಿಯಲ್ಲೂ ಚೌಕಾಸಿ ಮಾಡದೆ ಭಗವಂತನ ಜ್ಞಾನವೇ ಬೇಕೆನ್ನುತ್ತಿದ್ದಾನೆ.

2. ಉತ್ತಮರು ಸಿಕ್ಕಾಗ ಉತ್ತರ ಪಡೆಯಬೇಕೇ ವಿನಃ ಅವರ ಬಳಿ ನೆಲೆಸಿ ಉಂಬಳಿ ಕೇಳಬಾರದು. ಹರಿಯ ಮಹಿಮೆಗೆ ಸರಿಸಮ ಯಾವುದೂ ಇಲ್ಲ ಎಂಬ ನಿಶ್ಚಯ ಇರಬೇಕು. ಆದ್ದರಿಂದ ಈ ವರಕ್ಕೆ ಸರಿಸಮ ಯಾವುದೂ ಇಲ್ಲ ಎಂದನು.

3. ದೇವತೆಗಳು ಸಿಕ್ಕಾಗ ಲೌಕಿಕ ವರ ಬೇಡುವ ಸುವರ್ಣಾವಕಾಶ ಮತ್ತೆ ಸಿಗದು ಎಂಬ ಅಸುರರ ದೊಡ್ಡ ಪಟ್ಟಿಯೇ ಇದೆ. ಆದರೆ ದೇವತೆಗಳ ಬಳಿ ಜ್ಞಾನಬೇಡುವರ ಪಟ್ಟಿ ಬೆರಳೆಣಿಕೆಯಷ್ಟು ಮಾತ್ರ.

1. ಪ್ರಹ್ಲಾದ.
2. ನಚಿಕೇತ.
3. ಮಾರ್ಕಂಡೇಯ ಹೀಗೆ.

ಭಗವದ್ಭಕ್ತರನ್ನು ಎಂದಿಗೂ ನಿಂದಿಸದಿರಿ.

**ಶತಾಯುಷಃ ಪುತ್ರ ಪೌತ್ರಾನ್ ವೃಣೀಷ್ವ**

**ಬಹೂನ್ ಪಶೂನ್ ಹಸ್ತಿಹಿರಣ್ಯಮಶ್ವಾನ್ ।**

**ಭೂಮೇರ್ಮಹ ದಾಯತನಂ ವೃಣೇಷ್ವ**

**ಸ್ವಯಂ ಚ ಜೀವ ಶರದೋ ಯಾವದಿಚ್ಛಸಿ ॥**

ನೂರು ವರ್ಷಗಳ ತುಂಬ ಬಾಳಿ ಬದುಕಲ್ಲಿ ಮಕ್ಕಳು ಮೊಮ್ಮಕ್ಕಳನ್ನು ಕೇಳು, ಹಸುಗಳ ಹಿಂಡು, ದಿಗ್ಗಜಗಳ ದಂಡು, ಚಿನ್ನದ ಗಟ್ಟಿಗಳು, ಕುದುರೆಗಳಂತೆ ದೌಲತ್ತಿನ ವಾಹನಗಳು ಅಷ್ಟೇ ಏಕೆ ಭೂಮಿಯ ದೊಡ್ಡ ಜಾಗ, (ಹೊಲ-ಗದ್ದೆ-ಮನೆ- ಕ್ಷೇತ್ರ ಎಲ್ಲರ ಮೇಲಿನ ಒಡೆತನ) ಇದನ್ನು ಕೇಳು. ಎಲ್ಲಿಯ ತನಕ ಬದುಕಲು ಇಚ್ಛಿಸುವೆಯೋ ಅದನ್ನು ಕೇಳು.

ಜೇಡರ ಹುಳು ಒಲೆಯನ್ನು ಕಟ್ಟಿಕೊಂಡು ಒಳಗಡೆ ಸಿಕ್ಕಿ ತಾನೇ ಬಲಿಯಾಗುವಂತೆ ಮಾನವನು ಹೆಂಡತಿ ಮಕ್ಕಳು ಮೊಮ್ಮಕ್ಕಳು ಈ ಸಂಸಾರದ ಒಲಗೆ ಸಿಕ್ಕಿ ವಿಲಿ-ವಿಲಿ ಒದ್ದಾಡುತ್ತಾನೆ. ಅವನ ಬದುಕು ಈ ವ್ಯಾಮೋಹದಲ್ಲಿಯೇ ಮುಕ್ತಾಯವಾಗುತ್ತದೆ. ಅವರ ಆಯುಸ್ಸಿಗಾಗಿ ತನ್ನ  ವಯಸ್ಸನ್ನೆಲ್ಲಾ ತೀಡಿ ಮುಕ್ತಾಯವಾಗುತ್ತಾನೆ. ಆದರೂ ಆ ಪರಿವಾರವನ್ನೇ ತನ್ನ ಪರಿಹಾರ ಎಂದುಕೊಳ್ಳುತ್ತಾನೆ. ತಾನು ಸಾಯುತ್ತಿದದರೂ ತನ್ನ ಮಕ್ಕಳ ದುರ್ಗತಿಗೆ ಮುಂದಾರು ದಿಕ್ಕು? ಎಂದು ಅಳುತ್ತಾನೆ. ಸತ್ತರೂ ಸಾಯದ ಈ ವ್ಯಾಮೋಹದ ಬಲೆಗೆ ಬೀಳದವರೇ ಇಲ್ಲ. ಪ್ರತಿಯೊಬ್ಬನ ಸಾವಿಗೂ ಸಾಕ್ಷಿಯಾದ ಯಮನ ಈ ಮಾತು ಎಷ್ಟು ಕಟುಸತ್ಯ. ಹೀಗಾಗಿ ಭಾರೀ ಬಲೆಯನ್ನು ಬೀಸಿದವನು ಇವನು. ಇದರಿಂದ ಸಂನ್ಯಾಸಿಗಳಾದ ಸದಸ್ಯರೂ ಸಹ ಪಾರಾಗಲಾರರು ಎಂದಮೇಲೆ ಪಾಮರರ ಪಾಡೇನು?

ಪಶುಸಂಪತ್ತು ಇದು ಮಾನವನ ಪ್ರತಿಷ್ಠೆಯ ಪ್ರಪಂಚ. ಸಮಾಜದ ಸಂಪತ್ತು ರಕ್ಷಣೆ ಇವುಗಳಿಂದಲೇ ಅಲ್ಲವೆ? ಹಾಲು ಕುಡಿದ ಮಕ್ಕಳು ಹಾಲೆಂಡ್‌ಗೆ ಹೋಗಿ ತಂದೆತಾಯಿಗಳ ಮರೆತಾರು. ಆದರೆ ಹುಲ್ಲುತಿಂದ ಹಸು ಯಜಮಾನನಿಗೆ ಹಾಲುಣಿಸುವುದನ್ನು ಮರೆಯುವುದಿಲ್ಲ. ಒಂದು ಹಸುವಿನ ಹೊರಹಾಕುವ ಪದಾರ್ಥಗಳ ಸದುಪಯೋಗದ ಸಮೃದ್ಧಿಯೇ 36 ಲಕ್ಷಕ್ಕೂ ಮಿಗಿಲು. ಹಿಂದೆ ಹಸುವು ಸಮೃದ್ಧಿಯ ಸಂಕೇತವಾಗಿತ್ತು. ಇಂದು ಹಸುವಿನ ಹಾಲು ಬೇಕು. ಹಸು ನಮಗೆ ಬೇಡ ಎಂಬ ಹೆಡ್ಡತನ ನಮ್ಮದು. ಇಂದು ಮನೆ ಮನೆಯಲ್ಲೂ ನಾಯಿ. ಕೋಣೆ ಕೋಣೆಯಲ್ಲೂ ಬೆಕ್ಕು. ಇದು ಪ್ರತಿಷ್ಠೆಯಾಗಿ ಹೋಗಿದೆ.

**(ಮುಂದುವರಿಯುವುದು)**



**ಅವಲೋಕನ**

# ನಾರಾಯಣಾಷ್ಟಾಕ್ಷರ ಜಪವಿಧಿ ನಿಯಮವಿಧಿಯೇ ಹೊರತು ಪರಿಸಂಖ್ಯಾವಿಧಿಯಲ್ಲ

**-ಸಗ್ರಿ ರಾಘವೇಂದ್ರ ಉಪಾಧ್ಯಾಯ**

[ಕಳೆದ ಹನುಮಜ್ಜಯಂತಿಯ ಸಂದರ್ಭದಲ್ಲಿ ಪಲಿಮಾರು ಮೂಲಮಠದಲ್ಲಿ ಆಯೋಜಿಸಲಾಗಿದ್ದ 'ಪುರೋಹಿತಗೋಷ್ಠಿ'ಯಲ್ಲಿ 'ಧಾರ್ಮಿಕ ವಿಧಿವಿಧಾನಗಳ ಸಂಕೋಚ'- ಎಂಬ ವಿಷಯ ಚರ್ಚೆಗೆ ಇಡಲಾಗಿದ್ದು, ಇಲ್ಲಿ ಮಿಂಚಿದ ಕೆಲವು ಅಂಶಗಳು]

ಶ್ರೀಮಧ್ವರು ತಮ್ಮ ಸದಾಚಾರಸ್ಮೃತಿಯಲ್ಲಿ 'ಗಾಯತ್ರ್ಯಾಸ್ತ್ರಿಗುಣಂ ವಿಷ್ಣುಂ ಧ್ಯಾಯನ್ನಷ್ಟಾಕ್ಷರಂ ಜಪೇತ್' ಗಾಯತ್ರೀಮಂತ್ರವನ್ನು ಎಷ್ಟು ಸಂಖ್ಯೆಯಲ್ಲಿ ಜಪಿಸಲಾಗುವುದೋ ಅದಕ್ಕಿಂತ ಮೂರುಪಟ್ಟು ಸಂಖ್ಯೆಯಲ್ಲಿ ನಾರಾಯಣಾಷ್ಟಾಕ್ಷರ ಮಂತ್ರವನ್ನು ಜಪಿಸಬೇಕೆಂದು ವಿಧಿಸಿರುವರು.

ಗಾಯತ್ರಿಗಿಂತ ಮೂರು ಪಟ್ಟು ನಾರಾಯಣಾಷ್ಟಾಕ್ಷರಮಂತ್ರವನ್ನು ಜಪಿಸಲೇಬೇಕೆಂದರೆ **'ಸಹಸ್ರಪರಮಾಂ ದೇವೀಂ....'** ಎಂದಿರುವಂತೆ ಸಾವಿರ ಗಾಯತ್ರೀಮಂತ್ರ ಜಪಿಸಿದಲ್ಲಿ ಮೂರುಸಾವಿರ ಸಂಖ್ಯೆಯಲ್ಲಿ ನಾರಾಯಣಾಷ್ಟಾಕ್ಷರವನ್ನು ಜಪಿಸಬೇಕಾಗುವುದು. ಇದಕ್ಕೆ ತುಂಬ ಸಮಯದ ಅವಶ್ಯಕತೆ ಇದೆ. ಆದುದರಿಂದ ಅಷ್ಟು ಸಮಯಾವಕಾಶ ಇಲ್ಲ ಎಂದು ಸಾವಿರ ಗಾಯತ್ರೀಜಪ ಮಾಡುವ ಪ್ರವೃತ್ತಿಯೇ ನಿಂತು ಹೋಗುವುದು. ನಾರಾಯಣಾಷ್ಟಾಕ್ಷರ ಮಂತ್ರದ ನಂಟು ಗಾಯತ್ರಿಗೆ ಹಚ್ಚಿದ್ದರಿಂದ ಗಾಯತ್ರೀಮಂತ್ರ ಜಪದಲ್ಲಿ ಕಡಿತ ಬಂದಂತಾಗುವುದು. ಇದರ ಪರಿಹಾರಕ್ಕಾಗಿ **'ಗಾಯತ್ರ್ಯಾಸ್ತ್ರಿಗುಣಂ....'** ಇತ್ಯಾದಿ ಆಚಾರ್ಯರ ಮಾತಿಗೆ ನಾರಾಯಣಾಷ್ಟಾಕ್ಷರ ಮಂತ್ರವನ್ನು ಜಪಿಸುವುದಾದರೆ ಗಾಯತ್ರಿಗಿಂತ ಮೂರುಪಟ್ಟು ಸಂಖ್ಯೆಯಲ್ಲಿ ಜಪಿಸಬಹುದೇ ಹೊರತು ಅದಕ್ಕಿಂತ ಅಧಿಕಸಂಖ್ಯೆಯಲ್ಲಿ ಜಪಿಸಬಾರದು. **'ಸಹಸ್ರಪರ ಮಾಂ ದೇವೀಂ....'** ಎಂಬ ಮಾತಿಗನುಗುಣವಾಗಿ ಗಾಯತ್ರಿಯನ್ನು ಸಾವಿರ ಸಂಖ್ಯೆಯಲ್ಲಷ್ಟೇ ಜಪಿಸಬೇಕೆಂದು ಹೇಗೆ ವಿಧಿಸಲಾಗುವುದೋ ಹಾಗೆ ವಿಧಿಸುವುದರಲ್ಲಿ ತಾತ್ಪರ್ಯ ಎಂದಿಟ್ಟುಕೊಂಡು ಮೂರುಸಾವಿರ ನಾರಾಯಣಾಷ್ಟಾಕ್ಷರ ಮಂತ್ರ ಜಪಕ್ಕೆ

ಅವಕಾಶವಿಲ್ಲ ಎಂದು ಸಾವಿರ ಗಾಯತ್ರಿಯನ್ನೇ ಕೈಬಿಡುವ ಪ್ರಸಂಗವನ್ನು ದೂರಮಾಡಬಹುದೇ? ಎಂಬುದಾಗಿ ಆಚಾರ್ಯರ ಸಂದೇಶದ ಸಂಕೋಚದ ಆಧಾರದಲ್ಲಿ ನಾರಾಯಣಾಷ್ಟಾಕ್ಷರ ಜಪದ ಸಂಕೋಚವನ್ನು ಪ್ರಸ್ತಾಪಿಸಲಾಗಿತ್ತು.

**ಪರಿಸಂಖ್ಯಾ ವಿಧಿ ಅಲ್ಲ**

ಈ ಸಂಕೋಚದ ಪರಿಶೀಲನೆ ಶ್ರೀಮಧ್ವರ **'ಗಾಯತ್ರ್ಯಾಸ್ತ್ರಿಗುಣಂ ವಿಷ್ಣುಂ ಧ್ಯಾಯನ್ನಷ್ಟಾಕ್ಷರಂ ಜಪೇತ್'**... ಎಂಬ ಸಂದೇಶದ ಅಂತರ್ಯವನ್ನು ಅವಲಂಬಿಸಿದೆ. ಶಾಸ್ತ್ರೀಯ ಪರಿಭಾಷೆಯಲ್ಲಿ ಪರಿಶೀಲಿಸುವುದಾದರೆ ನಾರಾಯಣಾಷ್ಟಾಕ್ಷರ ಜಪದ ಬಗ್ಗೆ ಬಂದಿರುವ ಆಚಾರ್ಯರ ಈ ವಿಧಿ ನಿಯಮವಿಧಿಯಾಗಿ ಪ್ರಸ್ತಾಪಿಸಲ್ಪಟ್ಟಿದೆಯೋ ಪರಿಸಂಖ್ಯಾ ವಿಧಿಯಾಗಿಯೋ? – ಎಂದು ವಿವೇಚಿಸಬೇಕು. ನಾರಾಯಣಾಷ್ಟಾಕ್ಷರ ಮಂತ್ರವನ್ನು ಜಪಿಸಬೇಕು. ಜಪಕಾಲದಲ್ಲಿ ಶ್ರೀವಿಷ್ಣುವನ್ನು ಧ್ಯಾನಿಸಬೇಕು. ಗಾಯತ್ರೀಮಂತ್ರವನ್ನು ಎಷ್ಟು ಸಂಖ್ಯೆಯಲ್ಲಿ ಜಪಿಸಲಾಗುವುದೋ ಅದಕ್ಕಿಂತ ಮೂರುಪಟ್ಟು ಸಂಖ್ಯೆಯಲ್ಲೇ ನಾರಾಯಣಾಷ್ಟಾಕ್ಷರ ಮಂತ್ರವನ್ನು ಜಪಿಸಬೇಕು. ಹೀಗೆ ಮೂರು ನಿಯಮಗಳನ್ನು ಪ್ರಸ್ತುತಪಡಿಸುವುದಕ್ಕಾಗಿ ಈ ಸಂದೇಶ ಹೊರಟಿದ್ದರೆ ಇದು ನಿಯಮವಿಧಿ ಎನಿಸೀತು. ಆದರೆ ಇದರ ಬದಲಾಗಿ ನಾರಾಯಣಾಷ್ಟಾಕ್ಷರ ಮಂತ್ರವನ್ನು ಜಪಿಸುವುದಾದರೆ ಗಾಯತ್ರಿಮಂತ್ರದ ಜಪದ ಸಂಖ್ಯೆಗಿಂತ ಮೂರುಪಟ್ಟು ಸಂಖ್ಯೆಯಲ್ಲಷ್ಟೇ ಜಪಿಸಬೇಕು. ಪಂಚನಖವುಳ್ಳ ಪಶುಗಳನ್ನು ಭಕ್ಷಿಸುವುದಾದರೆ ಐದು ಸಂಖ್ಯೆಯಲ್ಲಷ್ಟೇ ಪಂಚನಖ ಪಶುಗಳನ್ನು ಭಕ್ಷಿಸಬೇಕು ಎಂದು **'ಪಂಚ ಪಂಚನಖಾ ಭಕ್ಷ್ಯಾಃ'** ಎಂಬ ಪರಿಸಂಖ್ಯಾವಿಧಿ ಹೇಗೆ ಹೊರಟಿದೆಯೋ ಹಾಗೆ ನಾರಾಯಣಾಷ್ಟಾಕ್ಷರ ಮಂತ್ರ ಜಪದ ಸಂಖ್ಯೆಯನ್ನು ನಿಯಮಿಸುವುದಕ್ಕೇ ಹೊರಟದ್ದು ಎಂದರೆ ಪರಿಸಂಖ್ಯಾವಿಧಿ ಎನಿಸೀತು.

ಆದರೆ ನಾರಾಯಣಾಷ್ಟಾಕ್ಷರ ಮಂತ್ರ ಜಪದ ಕುರಿತಾದ ಆಚಾರ್ಯರ ವಿಧಿ ಪರಿಸಂಖ್ಯಾವಿಧಿ ಎನ್ನಬೇಕಾದರೆ, ನಾರಾಯಣಾಷ್ಟಾಕ್ಷರ ಮಂತ್ರದ ಜಪ ಶ್ರುತಿಸ್ಮೃತಿಗಳಲ್ಲಿ ಬಹಳ ಪ್ರಸಿದ್ಧವಾಗಿದ್ದು, ಎಲ್ಲರ ಚಾಲ್ತಿಯಲ್ಲಿದ್ದಿರಬೇಕು. ಪಂಚನಖಪಶುಗಳ ಭಕ್ಷಣ ಹೇಗೆ ರಾಗದಿಂದಲೇ ಪ್ರಾಪ್ತವಾಗಿದೆಯೋ ಹಾಗೆ. ಆದರೆ ನಾರಾಯಣಾಷ್ಟಾಕ್ಷರ ಮಂತ್ರಜಪ ಗಾಯತ್ರೀಜಪದಷ್ಟು ಪ್ರಸಿದ್ಧವಾಗಿಲ್ಲ. ಆದುದರಿಂದ ಶ್ರೀಮಧ್ವರು ನಾರಾಯಣಾಷ್ಟಾಕ್ಷರ ಮಂತ್ರದ ಜಪವನ್ನೂ, ಜಪದ ಕಾಲದಲ್ಲಿ ವಿಷ್ಣುವಿನ ಧ್ಯಾನವನ್ನೂ, ಜಪದ ಸಂಖ್ಯೆಯನ್ನೂ ಅಪೂರ್ವವಾಗಿ ವಿಧಿಸುವುದಕ್ಕಾಗಿಯೇ 'ಗಾಯತ್ರ್ಯಾಸ್ತಿಗುಣಂ....' ಸಂದೇಶವನ್ನು ನೀಡಿರುವರೆಂದು ಭಾವಿಸಬಹುದಾಗಿದೆ. **(ಮುಂದುವರಿಯುವುದು)**

**ದೇಶ ಸೇವೆಯನ್ನು ದೇವರ ಸೇವೆಯೆಂಬ ಭಾವನೆಯಿಂದ ಮಾಡುತ್ತಿರಿ.**





# ಗರುಡಾರೂಢನಾದ ಹರಿಯು ರಕ್ಷಿಸಲಿ !!

ಬೆ. ನಾ. ವಿಜಯೀಂದ್ರಾಚಾರ್ಯ ಮೈಸೂರು

**ಹರಿರ್ವಿದಧ್ಯಾನ್ಮಮ ಸರ್ವರಕ್ಷಾಂ ನ್ಯಸ್ತಾಂಘ್ರಿಪದ್ಮಃ ಪತಗೇಂದ್ರಪೃಷ್ಠೇ ।**
**ದರಾರಿಚರ್ಮಾಸಿಗದೇಷುಚಾಪ ಪಾಶಾನ್ ದಧಾನೋಽಷ್ಟ ಗುಣೋಽಷ್ಟಬಾಹುಃ ॥**

ಕೋಮಲಗಳಾದ ಪಾದಕಮಲಗಳಿಂದ ಶೋಭಿಸುವ ಶ್ರೀಹರಿಯು ಗರುಡಾರೂಢನಾಗಿದ್ದಾನೆ. ಎಂಟು ಕೈಗಳಲ್ಲಿ ಎಂಟು ಆಯುಧಗಳನ್ನು ಧರಿಸಿದ್ದಾನೆ. ಕ್ರಮವಾಗಿ ಶಂಖ, ಚಕ್ರ, ಗುರಾಣಿ, ಖಡ್ಗ, ಗದೆ, ಬಾಣ, ಬಿಲ್ಲು, ಪಾಶಗಳು ಪರಮಾತ್ಮನ ಅತಿಶಯವಾದ ಎಂಟು ಗುಣಗಳ ಸಂಬಂಧವನ್ನು ಪ್ರಕಟಪಡಿಸುತ್ತವೆ.

ಸೃಷ್ಟಿ, ಸ್ಥಿತಿ, ಸಂಹಾರ, ನಿಯಮನ, ಜ್ಞಾನ, ಅಜ್ಞಾನ, ಬಂಧ, ಮೋಕ್ಷ ಎಂಬ ಅಸಾಧಾರಣ ಗುಣಗಳು ಪರಮಾತ್ಮನ ಲಕ್ಷಣವನ್ನು ತಿಳಿಸುತ್ತವೆ. ಈ ಗುಣಗಳನ್ನು ಗರುಡಾರೂಢನಾದ ಶ್ರೀಹರಿಯು ತನ್ನ ಕರಗಳಲ್ಲಿ ಪಿಡಿದ ಆಯುಧಗಳ ಮೂಲಕ ಸ್ಪಷ್ಟಪಡಿಸುತ್ತಿದ್ದಾನೆ.

ಬ್ರಹ್ಮದೇವರಲ್ಲಿ ಬ್ರಹ್ಮನಾಮಕನಾಗಿ ನೆಲೆಸಿದ ಶ್ರೀಹರಿಯು ಜಗತ್ತಿನ ಸೃಷ್ಟಿಯನ್ನು ಮಾಡುತ್ತಾನೆ. ಸೃಷ್ಟ ಪ್ರಪಂಚ ಎರಡು ಮುಖವಾಗಿದೆ, ನಾಮಾತ್ಮಕ, ರೂಪಾತ್ಮಕ ಎಂದು. ಶಬ್ದದ ಸೃಷ್ಟಿಯ ನಂತರ ರೂಪದ ಸೃಷ್ಟಿ. ಮೊದಲು ಸೃಷ್ಟವಾದ ಶಬ್ದ 'ಓಂ'ಕಾರ. ಓಂಕಾರದಲ್ಲಿಯೂ ಮೊದಲ ಅಕ್ಷರ 'ಅ'. ಇದಕ್ಕೆ ಅಭಿಮಾನಿ ಲಕುಮಿ. 'ಅ ಇತಿ ಬ್ರಹ್ಮಾ', **'ಅ ಆ ಅಂ ಅಃ ಪುರಾಣರ್ಷಿಃ ವ್ಯಾಸಃ ಶಾಖಾಸಹಸ್ರಕೃತ್'** ಎಂಬುದು ಪ್ರಮಾಣ. ಶಂಖಕ್ಕೆ ಅಭಿಮಾನಿ ಲಕುಮಿ. ಅದರಿಂದ ಉತ್ಪನ್ನವಾಗುವ ಶಬ್ದ 'ಓಂ', ಅದರಲ್ಲಿಯೂ ಮೊದಲು ಅ.

ಇಂದಿಗೂ ನಾವು ಬೆಳಿಗ್ಗೆ ಎದ್ದಕೂಡಲೇ ಶಂಖನಾದ ಕೇಳಬೇಕು. ಅದರಲ್ಲಿಯೂ ಮೊದಲ ಅಕ್ಷರದ ಅನುಸಂಧಾನಬೇಕು. ಅ = ಅಜ ಹುಟ್ಟಿಲ್ಲದ ಪರಮಾತ್ಮನನ್ನು ತಿಳಿಸಲು ಹೊರಟ ಸೃಷ್ಟಿಯ ಮೊದಲ ಶಬ್ದ 'ಅ'. 'ಅ' ಎಂಬ ಅಕ್ಷರವನ್ನು ಮೊದಲು ಲಕುಮಿಗೆ ಹೇಳಿಕೊಟ್ಟವ ತಂದೆ. ಮಕ್ಕಳಾದ ನಮಗೆ ಹೇಳುವವಳು ತಾಯಿ. ಇಂದಿಗೂ ನಮ್ಮ ಮಕ್ಕಳಿಗೆ ತಾಯಿ ಹೇಳುವ ಮೊದಲ ಅಕ್ಷರ 'ಅ'. 'ಅ' ಎಂದರೆ ಅಲ್ಲ. ಪರಮಾತ್ಮ ಅಲ್ಲ. ಏನಲ್ಲ. ನಾನಲ್ಲ. ನೀನಲ್ಲ. ಆದ್ದರಿಂದಲೇ ಪರಮಾತ್ಮ ಉ. ಉತ್ತಮ. ಹಾಗಾದರೆ ಅವನ ಸ್ವರೂಪ ಮ. ಚಿನ್ಮಯ. ಇದೇ 'ಓಂ'. ಇಲ್ಲಿಂದಲೇ ಎಲ್ಲ ಸೃಷ್ಟಿಗಳೂ ಆರಂಭ.

**ವೇದ–ಇತಿಹಾಸ–ಪುರಾಣಗಳ ಅಭಿಪ್ರಾಯಕ್ಕೆ ವಿರುದ್ಧವಾದ ದುಷ್ಟವಾದಗಳನ್ನು ಖಂಡಿಸಿರಿ.**

ಸಕಲ ನಾಮಾತ್ಮಕ ಪ್ರಪಂಚದ ಬೀಜಾಕ್ಷರವೇ 'ಓಂ'. ಆದ್ದರಿಂದಲೇ ಸಕಲ ಕಾರ್ಯಗಳ ಆರಂಭಕ್ಕೆ ಬ್ರಾಹ್ಮಣರ ಅನುಮತಿ ಕೇಳಿದಾಗ ಅವರ ನಾಲಿಗೆಯಿಂದ ಹೊರಡುವ ಶಬ್ದವೇ 'ಓಂ'. ಅವರ ಉದರ ಪೂರ್ಣವಾದಾಗಲೂ ಬರುವ ಶಬ್ದ 'ಓಂ'. ಅವರ ಅಧ್ಯಯನದ ಆರಂಭದ ಸ್ತೋತ್ರವೂ "ಹರಿಃ ಓಂ".

ಹೀಗೆ ನಾರಾಯಣವರ್ಮವು ಪರಮಾತ್ಮನ ಸೃಷ್ಟಿಯನ್ನು ಆರಂಭದಲ್ಲಿ ಹೇಳುವ ಮೂಲಕ ಮಾಡಿದ ಶಬ್ದವೇ 'ಓಂ'. ಹೀಗೆಯೇ ಶಂಖಧಾರಣೆಯೇ ಜಗತ್ತಿನ ಅಭೀಷ್ಟಗಳಿಗೆಲ್ಲ ಕಾರಣ ಎಂದು; ತನ್ನ ಮನದನ್ನೆಯಾದ ಲಕುಮಿಯೇ ಭಕ್ತಕೋಟಿಯಲ್ಲೇ ಗರಿಷ್ಠಳಾಗಿದ್ದಾಳೆ ಎಂದು; ಸೃಷ್ಟಿಯು ಇವಳ ಮೂಲಕವೇ ಎಂದು ಶಂಖದ ಮೂಲಕ ತಿಳಿಸುತ್ತಿದ್ದಾನೆ. ಹೀಗೆ ಶಂಖ = ಓಂ; ಅ = ಸೃಷ್ಟಿ. ಹಾಗಾದರೆ ದೇವರು ಸೃಷ್ಟಿಯ ಆರಂಭಕ್ಕೆ ಹೇಳಿದ ಪಾಠದಿಂದ ನಾವೇನು ಕಲಿಯಬೇಕೆಂದರೆ; ಹುಟ್ಟಿಲ್ಲದ ಜೀವರಿಗೆ ಅಂಟಿದ ಹುಟ್ಟೆಂಬ ನರಕವನ್ನು ತಪ್ಪಿಸಿಕೊಳ್ಳಲು ದೇವರು ಹೇಳಿದ; ಲಕುಮಿಗೆ ಹೇಳಿದ; ನಮ್ಮಪ್ಪ ಅಮ್ಮರು ಹೇಳಿದ ಪಾಠವನ್ನು ಸರಿಯಾಗಿ ಕಲಿಯಬೇಕು. ಅಕ್ಷರಾಭ್ಯಾಸದಿಂದಲೇ ಪರಮಾತ್ಮನಿಗೆ 'ಹುಟ್ಟಿಲ್ಲ' 'ಹುಟ್ಟಿಲ್ಲ' ಎನ್ನುತ್ತಾಹೋದರೆ ನಾವೂ ಸತ್ತ ಬಳಿಕ ಹುಟ್ಟಲ್ಲ: ಹೀಗೆ ಓಂಕಾರದ ಗುಟ್ಟನ್ನು ಮುಕ್ತಾಯಮಾಡುವಾಗಲೂ ಹೇಳುವ ಶಬ್ದವೇ ಓಂ. ಇಲ್ಲಿಗೆ 'ಓಂ'.

**ಚಕ್ರದಿಂದ ಸ್ಥಿತಿ :=**

ನಮ್ಮ ಬದುಕಿನಲ್ಲಿ ಸರಿಯಾದ ಮಾರ್ಗಕಂಡರೆ ಸ್ಥಿತಿ. ಇಲ್ಲವಾದಲ್ಲಿ ಅಧೋಗತಿ. ಅದಕ್ಕಾಗಿ ಸಂಸಾರ ಚಕ್ರದಲ್ಲಿ ಸಿಲುಕಿದವರು ಮಾಡಲೇ ಬೇಕಾದ ಸ್ತುತಿ, ಚಕ್ರಸ್ತುತಿ :–

**ಸುದರ್ಶನ ಮಹಾಜ್ವಾಲ ಕೋಟಿಸೂರ್ಯಸಮಪ್ರಭ ।**
**ಅಜ್ಞಾನಾಂಧಸ್ಯ ಮೇ ನಿತ್ಯಂ ವಿಷ್ಣೋರ್ಮಾರ್ಗಂ ಪ್ರದರ್ಶಯ ॥**

ಹರಿಯು ಧರಿಸಿದ ಚಕ್ರಕ್ಕೆ ಮತ್ತೊಂದು ಹೆಸರು ಸುದರ್ಶನ. ದರ್ಶನಗಳ ಜಂಜಾಟದಲ್ಲಿ ಮಾರ್ಗಭ್ರಷ್ಟರಾದವರಿಗೆ ಬೇಕು, **ಸು**= ಸಮೀಚೀನವಾದ **ದರ್ಶನ**= ಸಿದ್ಧಾಂತ. ಇದಕ್ಕಾಗಿ ನಾವು ಪ್ರಾರ್ಥಿಸಬೇಕು "ಸುದರ್ಶನ ಅಜ್ಞಾನದಿಂದ ಕುರುಡಾದ ನಮಗೆ ತೋರು ಶ್ರೀಹರಿಯ ಮಾರ್ಗ" ಎಂದು.

ಸ್ಥಿತಿ ಎಂದರೆ ರಕ್ಷಣೆ. ರಕ್ಷಣೆ ಎಂದರೆ ಎರಡನ್ನು ತುಂಬಿ ಎರಡನ್ನು ನಡೆಸುವುದು. ಯಾವುವು ಆ ಎರಡು. ಹೊಟ್ಟೆಯನ್ನೇ ತುಂಬುವ ಜಗತ್ತಿಗೆ ಮತ್ತೊಂದೇನು ತುಂಬಬೇಕೆಂಬುದು ತಿಳಿಯದಾಗಿದೆ. ಏಕೆಂದರೆ ಜಗತ್ತಿನ ಜನರ ತಲೆಯಲ್ಲಿ ತುಂಬಿದ್ದೆಲ್ಲ ಪಾಂಚಭೌತಿಕವಾದ ಜಡದೇಹಕ್ಕೆ ತುಂಬಬೇಕಾದ ಲೌಕಿಕ ವಿದ್ಯೆಯೇ ಹೊರತು, ಅಧ್ಯಾತ್ಮವಿದ್ಯೆಯಲ್ಲ. ಆದರೆ

ಮನೆಯ ಮುಂದೆ ಶ್ರೀ ತುಳಸಿಯ ವನ ಕಂಗೊಳಿಸುತ್ತಿರಲಿ



ಶ್ರೀಹರಿ ಕರುಣಿಸಿದ ಶಿರಕ್ಕೆ ಜ್ಞಾನಗರ್ಭವೆಂದು ಹೆಸರು. ಇದನ್ನೇ ಉಪನಿಷತ್ತು **'ಗರ್ಭ ಇವ ಸುಭೃತೋ ಗರ್ಭಿಣೀಭಿಃ'** ಎನ್ನುತ್ತದೆ. ಜ್ಞಾನಿಗಳ ಜ್ಞಾನಗರ್ಭದಲ್ಲಿ ಗೋಪಾಲ ಕೃಷ್ಣ ಬೆತ್ತಲೆಯಾಗಿ ಮಲಗಿದ್ದಾನೆ. ಅಜ್ಞಾನಿಗಳ ಶಿರದಲ್ಲಿ ಕತ್ತಲೆಯಿಂದ ಆವರಿಸಿದ್ದಾನೆ. ಜ್ಞಾನದ ಬೆಳಕು, ಅಜ್ಞಾನ ಕತ್ತಲೆಗಳಿಗೆ ಅಭಿಮಾನಿಯನ್ನಾಗಿ ತನ್ನ ಮಡದಿ0ಯಾದ ಮತ್ತೊಂದು ರೂಪದ ದುರ್ಗೆಯನ್ನೇ ಇಟ್ಟಿದ್ದಾನೆ. ಈ ದುರ್ಗೆಯ ಸೃಷ್ಟಿಯೇ ಜಗತ್ತಿನ ಈ ಕ್ರಮದ ಸ್ಥಿತಿಗೋಸ್ಕರ:–

**ದುರ್ಜ್ಞೇಯತ್ವಾತ್ ದುಃಖದತ್ವಾತ್ ದುಷ್ಪ್ರಾಪ್ಯತ್ವಾಚ್ಚ ದುರ್ಜನೈಃ ।**
**ಸತಾಂ ಅಭಯಭೂಮಿತ್ವಾತ್ ದುರ್ಗಾ ತ್ವಂ ಹೃದ್ಗುಹಾಶ್ರಯಾತ್ ॥**

ಎಂದಿದ್ದಾರೆ ವಾದಿರಾಜರು. ಜ್ಞಾನಗರ್ಭದಲ್ಲಿ ದುರ್ಗೆ ಜ್ಞಾನರೂಪಳಾಗಿ ಬೆಳಗಿದಾಗ ಜೀವಾತ್ಮರ ಹೃದಯ ಗುಹೆಯಲ್ಲಿ ಪರಂಜ್ಯೋತಿಯಾದ ಪರಮಾತ್ಮನ ಸ್ಥಿತಿ ಸ್ಥಿರವಾಗುತ್ತದೆ.

(ಮುಂದುವರೆಯುತ್ತದೆ)

(...10....ನೇ ಪಟದಿಂದ)

ಬಂದ ಪಟ್ಟದ ದೇವರು ಗೋಪಿನಾಥ. ಇವರು ಸಂಸ್ಕೃತದಲ್ಲಿ 'ವಾಗ್ವಜ್ರ' ಎಂಬವಾದಗ್ರಂಥವನ್ನು ರಚಿಸಿದ್ದಾರೆ. ಶ್ರೀಮಧ್ವಾಚಾರ್ಯರು ದಾಸಸಾಹಿತ್ಯದ ಪ್ರವರ್ತಕರು. ಶ್ರೀನರಹರಿತೀರ್ಥರು ಕನ್ನಡದಲ್ಲಿ ದಾಸಸಾಹಿತ್ಯವನ್ನು ಪ್ರಾರಂಭಿಸಿದವರು. ಆದರೆ ದಾಸಸಾಹಿತ್ಯದಲ್ಲೇ ಸಂಪೂರ್ಣ ತಮ್ಮನ್ನು ತೊಡಗಿಸಿಕೊಂಡು ಕನ್ನಡದಲ್ಲಿ ಅಸಂಖ್ಯಾತ ಭಗವತ್ಕೀರ್ತನೆಗಳನ್ನು ರಚಿಸಿ ಜನಮಾನಸದಲ್ಲಿ ಅಚ್ಚಳಿಯದಂತೆ ಮಾಡಿದವರು ಶ್ರೀಪಾದರಾಜರು. ದಾಸಸಾಹಿತ್ಯಕ್ಕೆ ಇವರ ಕೊಡುಗೆ ಅಪಾರ. ಇವರು ರಚಿಸಿದ 'ಜಯ ಜಯ ಜಗತ್ತ್ರಾಣ' ಎಂದು ಆರಂಭವಾಗುವ 'ಮಧ್ವನಾಮ' ಕೃತಿಯಂತೂ ಕನ್ನಡದ ವಾಯುಸ್ತುತಿಯೆಂದೇ ಸುಪ್ರಸಿದ್ಧವಾಗಿದೆ. ಇವರು ರಂಗನಾಥನ ಪರಮಭಕ್ತರಾದ್ದರಿಂದ ತಮ್ಮ ಕೃತಿಗಳನ್ನೆಲ್ಲ 'ರಂಗವಿಠಲ' ಎಂಬ ಅಂಕಿತದಿಂದಲೇ ರಚಿಸಿದ್ದಾರೆ. ಶ್ರೀಪಾದರಾಜರ ಗುಣಗಾನವನ್ನು ಅವರ ನಂತರ ಬಂದ ಎಲ್ಲ ದಾಸರುಗಳೂ ಕೀರ್ತನಾದಿಗಳ ಮೂಲಕ ಮಾಡಿದ್ದಾರೆ. 1504 ರವರೆಗೆ ಒಂಭತ್ತು ದಶಕಗಳ ಕಾಲ ವೇದಾಂತ ಸಿಂಹಾಸನದಲ್ಲಿ ವಿರಾಜಮಾನರಾಗಿದ್ದ ಇವರು ಜ್ಯೇಷ್ಠ ಶುದ್ಧ ಚತುರ್ದಶಿಯಂದು ಮುಳುಬಾಗಿಲಿನಲ್ಲಿರುವ ನರಸಿಂಹತೀರ್ಥದಲ್ಲಿ ವೃಂದಾವನ ಪ್ರವೇಶವನ್ನು ಮಾಡಿದ್ದಾರೆ. ಇಂತಹ ಮಹಾಮಹಿಮರ ಆರಾಧನೆಯ ಈ ಶುಭಸಂದರ್ಭದಲ್ಲಿ ಅವರೇ ರಚಿಸಿದ ಭಗವಂತನ ಕೀರ್ತನೆಯನ್ನು ಭಕ್ತಿಯಿಂದ ಹಾಡಿ ಶ್ರೀಪಾದರಾಜರ ಅಂತರ್ಯಾಮಿಯಾದ ಭಗವಂತನ ಕೃಪೆಗೆ ಪಾತ್ರರಾಗೋಣ.

ಎಂದಿಗೂ ನಾಸ್ತಿಕರಾಗಬೇಡಿ; ನಾಸ್ತಿಕವಾದಕ್ಕೆ ತಲೆಬಾಗಬೇಡಿ.

ಭಾಗ-2

# ಆಯುರ್ಯಜ್ಞ

**ಸಂಕಲನ: ಸುನಂದಕೀ**

ಯಜ್ಞರೂಪದ ಜೀವನವನ್ನು ಸಾಧಿಸುವ ಸಾಧಕನು ಮಾಡಬೇಕಾದ ಮೊದಲ ಅನುಸಂಧಾನ 'ಆಯುರ್ಯಜ್ಞ'. ಮನುಷ್ಯ ಜನ್ಮವೆತ್ತಿ ಬಂದ ಸಾಧಕನು ತನ್ನ ಪೂರ್ಣ ಜೀವಿತಾವಧಿಯನ್ನು ಅನುಸಂಧಾನಿಸುವ ಕ್ರಮವನ್ನು ಶ್ರೀಮದಾಚಾರ್ಯನಿರ್ದಿಷ್ಟ ಮಾರ್ಗದಲ್ಲಿ ಶ್ರೀಮಾದನೂರು ವಿಷ್ಣುತೀರ್ಥರು ಈ ರೀತಿ ಸೂಚಿಸುವರು.

ಎಲ್ಲ ಮೋಕ್ಷಾಪೇಕ್ಷಿಗಳಿಗೆ ಯೋಗ್ಯವಾದ ಹಾಗೂ ಭಗವಂತನ ಅಪರೋಕ್ಷಕ್ಕೆ ಅಂತರಂಗ ಸಾಧನವಾದ ಈ ಚಿಂತನೆಯನ್ನು ನಡೆಸಬೇಕು.

ಈ ಯಜ್ಞದ ಪೂರ್ವದಲ್ಲಿ ಉಪಾಸ್ಯನಾದ ಭಗವದ್ರೂಪ ನಾರಾಯಣ.

ಲೋಕಪ್ರಸಿದ್ಧವಾದ ಯಜ್ಞದಲ್ಲಿ ಮೂರು ಸವನಗಳಿರುತ್ತವೆ. ಅದರಂತೆಯೇ ಜೀವನಯಜ್ಞದಲ್ಲೂ ಮೂರುಸವನಗಳಿವೆ. ಅದರ ಅನುಸಂಧಾನದ ಕ್ರಮ ಈ ರೀತಿ.

ಮನುಷ್ಯನಿಗೆ ಇರುವ ಆಯುರ್ಮಾನ ನೂರು ವರ್ಷ. ಆದರೆ ಕೆಲವು (ಪಳ)ವಿಘಳಿಗೆ, ಇಪ್ಪತ್ತು ಘಳಿಗೆ ಅಧಿಕ, ಹತ್ತು ದಿನ ಅಧಿಕವಾದ ಹತ್ತು ತಿಂಗಳಿಗೆ ವರ್ಷವಾಗುವುದು ಎಂಬ ವಿವಕ್ಷೆಯಿಂದ, ಮಾನವ ಆಯುರ್ಮಾನ ನೂರಹದಿನಾರು ವರ್ಷಗಳಾಗುತ್ತವೆ. ಅದರಲ್ಲಿ ಮೂರು ಭಾಗಗಳೇ ಸವನತ್ರಯಗಳು. ಮೊದಲಿನ 24 ವರ್ಷಗಳು ಪ್ರಥಮ ಸವನ. ಅನಂತರದ 44 ವರ್ಷಗಳು ಎರಡನೆಯ ಸವನ. ಅನಂತರದ 48 ವರ್ಷಗಳು ತೃತೀಯ ಸವನ.

ಪ್ರಸಿದ್ಧ ಯಜ್ಞದಲ್ಲಿ 1) ಪ್ರಾತಃಸವನ 2) ಮಾಧ್ಯಂದಿನ ಸವನ 3) ಸಾಯಂಸವನ ಎಂದು ಮೂರು ಭಾಗ. ಅಲ್ಲಿ ಪ್ರಾತಃ ಸವನವು 24 ಅಕ್ಷರಗಳುಳ್ಳ ಗಾಯತ್ರೀ ಛಂದಸ್ಸಿನ ಮಂತ್ರ ಸಹಿತವಾದುದು. ಅದೇ ರೀತಿ ಜೀವನಯಜ್ಞದಲ್ಲೂ 24 ವರ್ಷಗಳ ಕಾಲವೇ ಪ್ರಾತಃ ಸವನ. ಪ್ರಾತಃ ಸವನಕ್ಕೆ ವಸುಗಳು ದೇವತೆಗಳು. ಈ ಜೀವಯಜ್ಞದಲ್ಲಿ ತತ್ತ್ವಾಭಿಮಾನಿ ದೇವತೆಗಳೇ ಸುಖದಿಂದ ಯೋಗ್ಯಪ್ರಾಣಿ ಸಮೂಹವನ್ನು ವಾಸಮಾಡಿಸುವವರಾದ್ದರಿಂದ ವಸುನಾಮಕರು. ಇದಕ್ಕೆ ವಾಸುದೇವನು ನಿಯಾಮಕ ದೇವತೆ.

ಪ್ರಸಿದ್ಧ ಯಜ್ಞದ ಮಾಧ್ಯಂದಿನ ಸವನಕ್ಕೆ 44 ಅಕ್ಷರಗಳುಳ್ಳ ತ್ರಿಷ್ಟುಪ್ ಛಂದಸ್ಕವಾದ ಮಂತ್ರಗಳು ಇರುವುವು. ಅದೇ ರೀತಿ ಆಯುರ್ಯಜ್ಞದಲ್ಲಿ 44 ವರ್ಷಗಳಿಂದ ಯುಕ್ತವಾದ ಕಾಲವೇ ಮಾಧ್ಯಂದಿನ ಸಮನವಾಗಿದೆ. ಈ ಮಾಧ್ಯಂದಿನ ಸವನಕ್ಕೆ ರುದ್ರರು ದೇವತೆಗಳು. ತತ್ತ್ವಾಭಿಮಾನಿಗಳೇ ಅಯೋಗ್ಯ ಜೀವರನ್ನು ರೋದಿಸುವಂತೆ ಮಾಡುವವರಾದ್ದರಿಂದ ರುದ್ರ

**ಜೀವನದಲ್ಲಿ ಪ್ರತಿಯೊಂದು ವಿಷಯವನ್ನು ಧನಾತ್ಮಕವಾಗಿಯೇ ಚಿಂತಿಸಿರಿ.**



ನಾಮಕರು. ಇದಕ್ಕೆ ಸಂಕರ್ಷಣನೇ ನಿಯಾಮಕ.

ಪ್ರಸಿದ್ಧ ಯಜ್ಞದ ತೃತೀಯ ಸಮನವು 48 ಅಕ್ಷರಗಳುಳ್ಳ ಜಗತೀ ಛಂದಸ್ಕವಾದ ಮಂತ್ರಸಹಿತವಾದುದು. ಈ ಜೀವಯಜ್ಞದಲ್ಲಿ 48 ವರ್ಷಗಳಿಂದ ಸಹಿತವಾದ ಕಾಲವೇ ತೃತೀಯ ಸಮನ. ಇದಕ್ಕೆ ಆದಿತ್ಯ ನಾಮಕರೇ ದೇವತೆಗಳು. ತತ್ತ್ವಾಭಿಮಾನಿಗಳು ಜೀವನಿಂದ ಕೊಡುವುದು, ತೆಗೆದುಕೊಳ್ಳುವುದು ಇತ್ಯಾದಿಗಳನ್ನು ಮಾಡಿಸುವುದರಿಂದ ಆದಿತ್ಯನಾಮಕರು. ಇದರಲ್ಲಿ ಪ್ರದ್ಯುಮ್ನ ನಿಯಾಮಕ.

ಪ್ರಸಿದ್ಧ ಸವನಗಳಲ್ಲಿ ವಸ್ವಾದಿದೇವತೆಗಳು ಯಜಮಾನನಿಂದ ಪ್ರಾರ್ಥಿಸಲ್ಪಟ್ಟು ತಾವು ಎಲ್ಲಿಯವರೆಗೆ ಅಲ್ಲಿರುತ್ತಾರೋ ಅಲ್ಲಿಯವರೆಗೆ ಬಂದ ವಿಘ್ನಗಳನ್ನು ನಿವಾರಣೆ ಮಾಡಿ ಯಜ್ಞವನ್ನು ಪೂರ್ಣ ಮಾಡುತ್ತಾರೆ. ಅದೇ ರೀತಿ ಈ ಜೀವಯಜ್ಞದ ಸವನಗಳಲ್ಲೂ 'ಹೇ ವಸ್ವಾದಿದೇವತೆಗಳೇ! ವಿಷ್ಣುಪೂಜಾತ್ಮಕ ಯಜ್ಞಸ್ವರೂಪನಾದ ನನ್ನನ್ನು ಜ್ವರಾದ್ಯುಪದ್ರವದಿಂದ ಯಜ್ಞ ಲೋಪವಾಗದಂತೆ ರಕ್ಷಿಸಿ ನಿಮ್ಮ ಆದಿಪತ್ಯದಲ್ಲಿ ಆ ರೀತಿ ಲೋಪವಾಗುವುದು ಉಚಿತವಲ್ಲ' ಇತ್ಯಾದಿಯಾಗಿ ಜೀವನು ಪ್ರಾರ್ಥಿಸಬೇಕು. ಆ ದೇವತೆಗಳನ್ನು ಜೀವನಯಜ್ಞವನ್ನು ರಕ್ಷಿಸುತ್ತಾರೆ.

ಪ್ರಸಿದ್ಧ ಯಜ್ಞದಲ್ಲಿ 1) ದೀಕ್ಷಾ 2) ಉಪಸದ 3) ಸ್ತುತಶಸ್ತ್ರ 4) ದಕ್ಷಿಣಾ 5) ಸೋಷ್ಯಂತೀ ವ್ಯವಹಾರ 6) ಅಸೌಷ್ಯೇತಿ ವ್ಯವಹಾರ 7) ಅವಭೃತ ಎಂದು ಏಳು ಆಕರಗಳಿವೆ.

ಅದೇ ರೀತಿ ಈ ಜೀವನಯಜ್ಞದಲ್ಲಿ

1) ಹಸಿವು, ಬಾಯಾರಿಕೆ ಇತ್ಯಾದಿ ಸಕಲ ಉಪದ್ರವಗಳಿಂದ ಬಂದ ಕಷ್ಟಾವಸ್ಥೆಯೇ 'ದೀಕ್ಷಾ' ಎನಿಸುವುದು. ಇದಕ್ಕೆ ಸ್ವಾಯಂಭು ಮನುವಿನ ಭಾರ್ಯೆಯಾದ ಶತರೂಪಾದೇವಿ ಅಭಿಮಾನಿ ದೇವತೆ.

2) ಭೋಜನ, ಜಲಪಾನ ಇತ್ಯಾದಿ ಸುಖಾವಸ್ಥೆಗಳಿಂದ ಕೂಡಿದ ಜೀವನ ಚಟುವಟಿಕೆಗಳೇ 'ಉಪಸದ' ನಾಮಕ

3) ನಗುವುದು, ತಾಂಬೂಲಚರ್ವಣ, ಮೈಥುನ, ಶವವನ್ನು ಹೊರುವುದು, ಅದನ್ನು ಸುಡುವುದು ಮೊದಲಾದವುಗಳಿಗೆ 'ಸ್ತುತಶಸ್ತ್ರ' ಎಂಬ ಸಂಜ್ಞೆ. (ಋಕ್ಕುಗಳಲ್ಲಿ ಸಾಮಗಾನ ಮಾಡುವುದೇ ಸ್ತೋತ್ರ. ಕೇವಲ ಮಂತ್ರ ಪಾಠಗಳೇ ಶಸ್ತ್ರಗಳು.)

4) ಕಾಯಕ್ಲೇಶಾದಿರೂಪವಾದ ವೇದಾಭ್ಯಾಸರೂಪವಾದ ಚಿಂತನೆಗಳೇ ತಪಸ್ಸು. ವಿದ್ಯಾದಾನ, ಅನ್ನದಾನಾದಿರೂಪ ಆರ್ಜವ, ಅಹಿಂಸಾ-ಸತ್ಯವಾಕ್ ಇತ್ಯಾದಿಗಳೇ 'ದಕ್ಷಿಣೆ'. ಇದಕ್ಕೆ ಸ್ವಾಯಂಭೂಮನು ಅಭಿಮಾನಿದೇವತೆ.

**(....38....ನೇ ಪುಟದಲ್ಲಿ)**

**ಅತಿಥಿ ಸತ್ಕಾರವನ್ನು ತಪ್ಪದೆ ನಡೆಸಿರಿ.**

**ಧಾರಾವಾಹಿ (ಭಾಗ -56)** **ಮಧ್ವಚರಿತ್ರೆ**

# ಶ್ರೀಮಧ್ವರ ಅದ್ಭುತವಾದ ಉಪನ್ಯಾಸಭಾರತೀ

-ಅನಂತಕೃಷ್ಣಾಚಾರ್ಯ,ಉಡುಪಿ

ಜಯಸಿಂಹರಾಜನ ಪ್ರಾರ್ಥನೆಯಂತೆ ಆಚಾರ್ಯಮಧ್ವರು ಕೂಡ್ಲುಗ್ರಾಮದ ವಿಷ್ಣುಮಂಗಲ ದೇವಾಲಯದಲ್ಲಿ ಹಲವು ದಿನಗಳನ್ನು ಕಳೆದರು.

ಒಮ್ಮೆ ಪಾಡಿ-ಕುಡೆಲ್ ಎಂಬ ಎರಡು ಗ್ರಾಮದ ಜನರು ನೆರೆದಿದ್ದಾಗ ಆಚಾರ್ಯರು ಹಿಂದೆಂದಿಗಿಂತಲೂ ವಿಶಿಷ್ಟವಾದ ರೀತಿಯಿಂದ ಅದ್ಭುತವಾಗಿ ಬ್ರಹ್ಮಸೂತ್ರಭಾಷ್ಯವನ್ನು ವಿವರಿಸಿದರು.

ಅಂದು ಆಚಾರ್ಯರಿಗೆ ಎಲ್ಲಿಲ್ಲದ ಹುಮ್ಮಸ್ಸು. ಏಕೆಂದರೆ ಅದ್ವೈತ ಸಿದ್ಧಾಂತವೆಂಬ ರಥವನ್ನೇರಿ, ಹರಿತವಾದ ತರ್ಕವೆಂಬ ಆಯುಧವನ್ನು ಹಿಡಿದ ತ್ರಿವಿಕ್ರಮಪಂಡಿತರು ಆಚಾರ್ಯರ ಎದುರು ಕುಳಿತಿದ್ದಾರೆ!

ಸಕಲ ಜೀವರ ಸ್ವರೂಪವನ್ನು ಬಲ್ಲ ಆಚಾರ್ಯರಿಗೆ ತ್ರಿವಿಕ್ರಮಪಂಡಿತರ ಸ್ವರೂಪದ ಅರಿವಿಲ್ಲವೆ? 'ಇದು ನಿಜವಾಗಿಯೂ ಸಚ್ಚೇತನ. ಕಾಲಪ್ರಭಾವದಿಂದ ಅದ್ವೈತ ಶಾಸ್ತ್ರವನ್ನು ಓದಿ ಕರ್ಕಶವಾದ ತರ್ಕದ ಬಲದಿಂದ ಸ್ವಲ್ಪ ಮನಸ್ಸನ್ನು ಕೆಡಿಸಿಕೊಂಡಿದೆ. ಇಂದು ಆ ಕಶ್ಮಲವನ್ನು ತೊಳೆದು ಶುದ್ಧಗೊಳಿಸಿ ಮತ್ತೆ ಸರಿದಾರಿಗೆ ತರಬೇಕು' ಎಂದು ಆಚಾರ್ಯರು ನಿಶ್ಚಯಿಸಿದಂತಿತ್ತು. ಆದ್ದರಿಂದ ಅಂದು ಆಚಾರ್ಯರಿಗೆ ಯುದ್ಧಕ್ಕೆ ಹೊರಟ ಯೋಧನಿಗೆ ಎದುರಾಳಿ ದೊರೆತಂತೆ ತ್ರಿವಿಕ್ರಮಪಂಡಿತರು ಕಂಡರು.

ಆಗ ಆಚಾರ್ಯರ ಮುಖಕಮಲದಿಂದ ಸೇನಾಪತಿಯ ಮುಂದಾಳುತ್ವದಲ್ಲಿ ಜಯದ ಹಠತೊಟ್ಟು ಹೊರಟ ಸೇನೆಯಂತೆ ಪ್ರವಚನದ ಮಾತುಗಳು ಹೊರಬರಲಾರಂಭಿಸಿದವು.

ಆ ಮಾತುಗಳು ಸೈನ್ಯದ ನಡಿಗೆಯಂತೆ ತೀರನಿಧಾನವೂ ಅಲ್ಲದ, ತೀರ ವೇಗವೂ ಇಲ್ಲದ, ನಿರಂತರವಾದ ನಡೆಯಿಂದ ಎಲ್ಲೂ ಎಡವದೆ ಸಾಗುತ್ತಾ, ದೂರದಲ್ಲಿ ಗಮನಿಸುವವರಿಗೆ ಬಿಡಿಬಿಡಿಯಾಗಿರದೆ ಒಂದೇ ತುಣುಕಿನಲ್ಲಿರುವಂತೆ ಭಾಸವಾಗುತ್ತಿತ್ತು.

ಆಚಾರ್ಯರ ಪ್ರವಚನ ವೇದ, ಬ್ರಹ್ಮಸೂತ್ರ, ನಿಖರವಾದತರ್ಕ, ಇತಿಹಾಸ-ಪುರಾಣಗಳ ಮಾತುಗಳಿಂದ ತುಂಬಿತ್ತು. ಇದೂ ತ್ರಿವಿಕ್ರಮರೆಂಬ ಎದುರಾಳಿಯ ವಿರುದ್ಧ ಹೊರಟ ಚದುರಂಗ ಸೈನ್ಯದಂತೆ ಭಾಸವಾಗುತ್ತಿತ್ತು. ನಾಲ್ಕು ಅಧ್ಯಾಯಗಳ ಬ್ರಹ್ಮಸೂತ್ರವೇ ರಥದಂತಿದ್ದರೆ, ತಡೆಯಿರದ ವೇದವೇ ಸಲಗದಂತಿತ್ತು. ನಿಖರವಾದ ತರ್ಕವೇ ಕಾಲಾಳುಗಳ ಸಾಲಾಗಿದ್ದರೆ, ನಾನಾ ಬಗೆಯ ಪುರಾಣ-ಇತಿಹಾಸಗಳೇ ಕುದುರೆಗಳಂತಿದ್ದವು.

ಎಲ್ಲಾ ಭಾಷೆಗಳ ಮಾತೃಭಾಷೆಯಾದ ಸಂಸ್ಕೃತವನ್ನು ಕಲಿಯಿರಿ.



ಮಾತಿನಲ್ಲಿ ಲಕ್ಷ್ಮಿ ನೆಲೆಸಿರಬೇಕೆಂಬುದು ವೇದವಾಣಿ. ಹೌದು, ಆಚಾರ್ಯರ ಮಾತೇ ಇನ್ನೊಬ್ಬ ಲಕ್ಷ್ಮಿಯಂತಿತ್ತು. ಲಕ್ಷ್ಮಿ ಬಾಳಕಡಲಿನ ಶೋಕ, ಮೋಹ, ಮುಪ್ಪು, ರೋಗ, ಹಸಿವು, ಬಾಯಾರಿಕೆಗಳೆಂಬ ಆರು ತೆರೆಗಳನ್ನು ಪರಿಹರಿಸುವವಳು. ಆಚಾರ್ಯರ ಮಾತೂ ಅದೇ ಸಾಮರ್ಥ್ಯ ಹೊಂದಿತ್ತು. ಲಕ್ಷ್ಮಿಯು ಆಳವಾದ ಸಮುದ್ರದಿಂದ ಉದಿಸಿ ಬಂದವಳು. ಆಚಾರ್ಯರ ಮಾತು ಆಳವಾದ ವಿವರಣೆಯಿಂದ ಕೂಡಿದ್ದಾಗಿತ್ತು.

ಆಚಾರ್ಯರ ಆ ಮಾತುಗಳನ್ನು ಎಷ್ಟು ಬಣ್ಣಿಸಿದರೂ ಕಡಿಮೆಯೇ ಸರಿ. ಅದು ಗಂಗೆಯಂತೆ ಹರಿಯ ಪಾದವನ್ನಾಶ್ರಯಿಸಿದ, ಚತುರ್ಮುಖನ ಸಾಧನೆಗೆ ಉಪಯುಕ್ತವಾದ, ಶಿವನೂ ತಲೆಯಲ್ಲಿ ಗೌರವಾದರಗಳಿಂದ ಹೊರುವ ಮಾತಾಗಿತ್ತು.

ಆ ಮಾತಿನಲ್ಲಿ ಅಂಥಾದ್ದು ಏನಿತ್ತು? ಎಲ್ಲವನ್ನೂ ಬಲ್ಲ ಆಚಾರ್ಯರು ಮೊದಲು ವೇದದ ಮಾತುಗಳಿಂದ, ಯುಕ್ತಿಯಿಂದ ಪ್ರತಿಜ್ಞೆ ಮಾಡಿದರು-'ಶ್ರೀಮನ್ನಾರಾಯಣನು ಸಕಲ ಗುಣಗಳ ನೆಲೆ, ಅವನನ್ನೇ ವೇದಗಳು 'ಬ್ರಹ್ಮ' ಎಂದು ಕರೆಯುತ್ತಿವೆ. ಸಕಲ ವೇದಗಳೂ ಅವನನ್ನೇ ಹೊಗಳುತ್ತಿವೆ. ಅವನು ಕೇವಲ ವೇದದಿಂದ ಮಾತ್ರ ತಿಳಿಯಲ್ಪಡುವವ. ಅವನೇ ಎಲ್ಲವನ್ನೂ ಮಾಡಿದವನು' ಎಂದು.

ಬಳಿಕ ಈ ಮಾತುಗಳಿಗೆ ವಿರುದ್ಧವಾಗಿರುವ ಎಲ್ಲ ಅಭಿಪ್ರಾಯವನ್ನು, ಮತಗಳನ್ನೂ ವಿಮರ್ಶಿಸಿ ಖಂಡಿಸಿ ತಮ್ಮ ಪ್ರತಿಜ್ಞೆಯನ್ನು ಸಮರ್ಥಿಸಿದರು.

## ಕೇವಲ ಜಡಪ್ರಕೃತಿಯಿಂದ ಸೃಷ್ಟಿ ಅಸಾಧ್ಯ

ಆಚಾರ್ಯರು ಅವತರಿಸುವುದಕ್ಕಿಂತ ಮೊದಲು ಪ್ರಚಲಿತವಿದ್ದ ಮತಗಳಲ್ಲಿ ಸಾಂಖ್ಯಮತವೂ ಒಂದು. ಸಾಂಖ್ಯರಲ್ಲಿ ನಿರೀಶ್ವರ ಸಾಂಖ್ಯ, ಸೇಶ್ವರ ಸಾಂಖ್ಯರೆಂದು ಎರಡು ವಿಧ. ಒಬ್ಬರು ದೇವರನ್ನು ಒಪ್ಪದವರು. ಮತ್ತೊಬ್ಬರು ದೇವರನ್ನು ಒಪ್ಪುವವರು.

ಆಚಾರ್ಯರು ಮೊದಲು ನಿರೀಶ್ವರ ಸಾಂಖ್ಯಮತವನ್ನು ವಿಮರ್ಶಿಸಿ ಖಂಡಿಸಿದರು. ಕೆಲವರು ಈ ಜಗತ್ತಿನ ಸೃಷ್ಟಿಗೆ ದೇವರ ಅವಶ್ಯಕತೆಯೇ ಇಲ್ಲವೆಂದು ಪ್ರತಿಪಾದಿಸುವವರು. ಅವರು ಜಗತ್ತಿನಲ್ಲಿರುವ ಜಡಪ್ರಕೃತಿ (ಸೂಕ್ಷ್ಮಪದಾರ್ಥಗಳು) ತಾನೇ ತಾನಾಗಿ ಬದಲಾವಣೆಗೊಂಡು ವಿಶ್ವವಾಗುತ್ತದೆ ಎಂದು ಅಭಿಪ್ರಾಯಪಡುತ್ತಾರೆ. ಅದಕ್ಕೆ ಅವರು ಕೊಡುವ ದೃಷ್ಟಾಂತ 'ಹಾಲುಮೊಸರಾದಂತೆ' ಎಂದು. ಆದರೆ ಇದು ಸರಿಯಲ್ಲ. ಹಾಲು ತಾನೇ ತಾನಾಗಿ ಮೊಸರಾಗುವುದಿಲ್ಲ. ಅದಕ್ಕೆ ಹೆಪ್ಪು ಹಾಕಲು ಒಬ್ಬ ಚೇತನ ಬೇಕೇ ಬೇಕು. ಹಾಗೆಯೇ ಜಡಪ್ರಕೃತಿ ತಾನೇ ತಾನಾಗಿ ವಿಶ್ವವಾಗುವುದಿಲ್ಲ. ಮಣ್ಣಿನಿಂದ ಮಡಿಕೆ ಮಾಡುವ ಕುಂಬಾರನಂತೆ ಜಡಪ್ರಕೃತಿಯಿಂದ ಜಗತ್ತನ್ನು ನಿರ್ಮಿಸುವ ಒಬ್ಬ ಹಿರಿಯ ಚೇತನನನ್ನು ಒಪ್ಪಲೇ ಬೇಕಾಗುತ್ತದೆ. ಅವನ ಇಚ್ಛೆಯಂತೆಯೇ ಜಗತ್ತು ನಿರ್ಮಾಣಗೊಂಡಿದೆಯೆಂದು ಹೇಳಲೇಬೇಕಾಗುತ್ತದೆ. ಜಗತ್ತಿನಲ್ಲಿ ಚೇತನನ ಇಚ್ಛೆಯಿಲ್ಲದೆ

(....38....ನೇ ಪುಟದಲ್ಲಿ)

ರಾಮಾಯಣ-ಮಹಾಭಾರತ-ಭಾಗವತವನ್ನು ಕೇಳುತ್ತಿರಿ, ಓದುತ್ತಿರಿ.

# ಸದ್ಗತಿದಾಯಕವಿದು

ವಿದ್ವಾನ್ ಅಪ್ಪಣಾಚಾರ್ಯ, ಕೌತಾಳಂ

**ವಿನಯದ ವಿಜ್ಞಾಪನೆಗಳು**

ಎಲ್ಲ ಜ್ಞಾನಿಗಳ, ವಿದ್ವಾಂಸರ, ಹರಿದಾಸ ಬಂಧುಗಳ ಅಡಿದಾವರೆಗಳಿಗೆ ಅನಂತ ಪ್ರಣಾಮಗಳು. ಈ ರಚನೆ ನನ್ನದಲ್ಲ. ನಾನು ಒಂದು ಅರಿಯದ ಮಂದಮತಿ. ಎಲ್ಲ ವ್ಯಾಖ್ಯಾನಕಾರರ, ಶಿರಿವಾರ ರಾಮಾಚಾರ್ಯರಂಥಾ ಅನುಭವಿಗಳ, ಹಾಗೂ ಹಿರಿಯ ಸಾಧಕ ವಿದ್ವಾಂಸರ ಅನುಭವಗಳ ಸರಮಾಲೆ ಇದು. ಶ್ರೀವಿದ್ಯಾಮಾನ್ಯತೀರ್ಥರು, ಶ್ರೀಸುಶಮೀಂದ್ರತೀರ್ಥರು, ಶ್ರೀವಿದ್ಯಾಧೀಶತೀರ್ಥರು ಮನತುಂಬಿ ಹರಿಸಿದರು. ಅವರ ಆಶೀರೂಪ ಲೇಖನಿಯನ್ನು ನನಗಿತ್ತ ಶ್ರೀಹರಿ ನನ್ನಿಂದ ಶಬ್ದಗಳ ಜೋಡಣೆಯ ಕಾರ್ಯವನ್ನು ಮಾಡಿಸಿರುವನು. ಮಂತ್ರಾಲಯ ಮಹಾಪ್ರಭುಗಳ ಅಂತರಂಗ ಭಕ್ತರೆನಿಸಿದ ಗೋಪಾಲದಾಸರ ಪರಂಪರೆಗೆ ಸೇರಿದ ಗುರುಜಗನ್ನಾಥದಾಸರ ಹರಿಕಥಾಮೃತಸಾರ ಸಂಸ್ಕೃತ–ಕನ್ನಡ ವ್ಯಾಖ್ಯಾನಗಳೇ ಈ ರಚನೆಗೆ ಮೂಲ ಸ್ಫೂರ್ತಿ.

ವೇದ ಶಾಸ್ತ್ರ ಪುರಾಣ ಕಥೆಗಳ
ಓದಿ ಕೇಳ್ದವನಲ್ಲ ತತ್ತ್ವದ
ಹಾದಿ ತಿಳಿದವನಲ್ಲ ಬುಧಜನ ಸಂಗ ಮಾಡಲಿಲ್ಲ
ಮೋದತೀರ್ಥಪದಾಬ್ಜಮಧುಕರ
ರಾದ ಶ್ರೀಗುರುರಾಘವೇಂದ್ರರ
ಪಾದಪದ್ಮಪರಾಗಲೇಶದ ಸ್ಪರ್ಶಮಾತ್ರದಲಿ
ಕೃತಿಯ ಮಾಡುವ ಶಕುತಿ ಪುಟ್ಟಿತು

ಗುರುರಾಜಗುರುಸಾರ್ವಭೌಮ ನಿನ್ನಯಪಾದಸರಸಿಜಯುಗಕಭಿನಮಿಸುವೆ.

**ವಾಸುದೇವೈಕಪ್ರಕಾರದಿ–ಈಶನೆನಿಸುವ ಬ್ರಹ್ಮರುದ್ರ ಶ**
**ಚೀಶ ಮೊದಲಾದಮರರೆಲ್ಲರು ದಾಸರೆನಿಸುವರು**

ಹರಿಯಿಂದ ಈಶತತ್ವವೂ, ಜೀವರಿಂದ ದಾಸತ್ವವೂ ಎಂದೂ ಬಿಟ್ಟಗಲವು. ಜೀವಿ ಸದಾ ದಾಸ. ಈ ರಹಸ್ಯ ದಾಸ ಶಬ್ದದಲ್ಲೇ ಅಡಗಿದೆ. ದಾಸ ಶಬ್ದವನ್ನು ಹಿಂದಿನಿಂದ ಓದಿದರೆ (ಸದಾ) ಇದು ಸ್ಪಷ್ಟ. ಮಹಿದಾಸನಾಮಕ ಪರಮಾತ್ಮನೇ ಬ್ರಹ್ಮಾದಿ ದೇವತೆಗಳಿಗೆ ದಾಸತ್ವದ ಹಿರಿಮೆಯನ್ನು ತೋರಿಸಿಕೊಟ್ಟನು.

ಇಂದ್ರಿಯಗಳೆಂಬ ಕುದುರೆಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನಿಸಿ.



**ವಾಸುದೇವಸ್ಯ ಯೇ ಭಕ್ತಾಃ ಶಾಂತಾಸ್ತದ್ಗತಮಾನಸಾಃ**
**ತೇಷಾಂ ದಾಸಸ್ಯ ದಾಸೋಹಂ ಭವೇಜ್ಜನ್ಮನಿ ಜನ್ಮನಿ ॥**

ಇವು ವಿದುರನ ಮಾತುಗಳು. ಅನುಭವದ ಮಾತುಗಳು. ಪುರಂದರದಾಸರು ಸಹ ತಮ್ಮ ಒಂದು ಉಗಾಭೋಗದಲ್ಲಿ

**ದಾಸನಾಗುವುದಕ್ಕೆ ಏಳು ಜನ್ಮಗಳ ಸುಕೃತ**
**ಭಾಸುರ ರವಿಕೋಟಿ ಶ್ರೀಶ ಸುಗುಣವಂತ ನಿನ್ನ**
**ದಾಸರ ದಾಸ್ಯ ಲೇಸಾಗಿ ಕೊಡುಕಂಡ್ಯ ಪುರಂದರ ವಿಠಲ**

ಎಂದು ಹೇಳಿ ಮೇಲ್ಕಂಡ ವಿಷಯವನ್ನೇ ಸಮರ್ಥಿಸಿರುವರು. ನಿರಂತರ ಭಗವಂತನ ಗುಣಗಾನದಲ್ಲಾಸಕ್ತರೂ, ಅತಿರೋಹಿತ ವಿಮಲವಿಜ್ಞಾನಿಗಳೂ, ಜೀವೋತ್ತಮರೂ ಆದ ಶ್ರೀಮದಾನಂದತೀರ್ಥರು ತಾವು ನಿರಂತರ ದಾಸರೆಂಬುದನ್ನು ತಮ್ಮ ಗ್ರಂಥಗಳಲ್ಲಿ ಅಲ್ಲಲ್ಲಿ ಸೂಚಿಸಿರುವರು. ಅಂತು ತಮ್ಮ ಸಕಲ ನಡೆನುಡಿಗಳ ದ್ವಾರಾ ದಾಸಭಾವವನ್ನು ಎತ್ತಿ ತೋರಿಸಿದ ಆಚಾರ್ಯರು ದಾಸರಲ್ಲಿ ಶ್ರೇಷ್ಠ ದಾಸರು. ಇವರ ಮುಖಕಮಲದಿಂದ ಹೊರಹೊಮ್ಮಿದ ವಾಙ್ಮಯವೆಲ್ಲವೂ ನಿಜವಾದ ದಾಸವಾಙ್ಮಯ. ಇಂತಹ ದಾಸಶ್ರೇಷ್ಠರ ಪರಮಾನುಗ್ರಹಕ್ಕೆ ಪಾತ್ರರಾಗಿ, ತಮ್ಮ ದೇಹದ ಪ್ರತಿಅಣುವಿನಲ್ಲೂ ಆಚಾರ್ಯಮಧ್ವರ ರೂಪವನ್ನೂ, ಸಿದ್ಧಾಂತವನ್ನೂ ತುಂಬಿಕೊಂಡವರು ಶ್ರೀರಂಗಒಲಿದದಾಸರು–ಜಗನ್ನಾಥದಾಸರು. ಇವರ ಅಮರಕೃತಿಯೇ 'ಹರಿಕಥಾಮೃತಸಾರ' ಇದು ಕನ್ನಡದ 'ಅಣುಸುಧಾ'. ಪಂಢರಪುರಾಧೀಶನೇ ದಾಸರಿಗೆ 'ಜಗನ್ನಾಥವಿಠಲ,' ಎಂಬ ಅಂಕಿತವನ್ನೂ ಕೊಟ್ಟು ಕರುಣಿಸಿದನು. ಹರಿದಾಸರ ಪರಂಪರೆಯಲ್ಲಿ 'ಪ್ರಸನ್ನವೇಂಕಟದಾಸರು, ವಿಜಯದಾಸರು, ಜಗನ್ನಾಥದಾಸರು ಈ ಮೂರು ಜನರು ಮಾತ್ರ ನೇರವಾಗಿ ಭಗವಂತನಿಂದಲೇ ಅಂಕಿತಪಡೆದ ಧನ್ಯಜೀವಿಗಳು. ವಿಠಲನೇ ಜಗನ್ನಾಥದಾಸರಿಗೆ ಸ್ವಪ್ನದಲ್ಲಿ ವ್ಯಾಸರಾಜರ , ವಾದಿರಾಜರ, ಪುರಂದರದಾಸರ ದ್ವಾರ ಹರಿಕಥಾಮೃತವನ್ನು ರಚಿಸಲು ಸೂಚಿಸಿದನು. ತಾನೇ ದಾಸರಲ್ಲಿ ನಿಂತು ನುಡಿದು ನುಡಿಸಿದನು. ಶ್ರೀಶನ ಪರಮಾನುಗ್ರಹದಿಂದ ಹೊರಹೊಮ್ಮಿದ ಹರಿಕಥಾಮೃತಸಾರ ಗ್ರಂಥವು ನಿಷ್ಠಾವಂತಸಾಧಕನಿಗೆ ಜಾಂಬಾಪರೋಕ್ಷವನ್ನುಂಟುಮಾಡಿ ಸದ್ಗತಿಯನ್ನಿತ್ತು ಉದ್ಧರಿಸುವುದು. ಇದು ಜ್ಞಾನಿಜನ ಸಮ್ಮತ. **(ಸಶೇಷ)**

ಸತ್ಯ, ಪ್ರಿಯ ಮತ್ತು ಹಿತ ನುಡಿಗಳು ನಿಮ್ಮ ಜೀವನದಲ್ಲಿ ಹಾಸುಹೊಕ್ಕಾಗಿರಲಿ.

ವ್ಯಾಸಜಯಂತಿಯ ಪಂಚಕಜ್ಜಾಯ

# ಒಂದೇ ಸಂದೇಶದಿಂದ ಎರಡು ದೋಷಗಳ ಪರಿಹಾರ

**ಮೂಲ–ಶ್ರೀವಿದ್ಯೇಶತೀರ್ಥರು** **ಸಂಗ್ರಹ–ಸಗ್ರಿ**

ಸಮಾಜದಲ್ಲಿ ಎರಡು ಬಗೆಯ ಜನರಿರುವರು. 'ತಾನೇ ದೊಡ್ಡವ. ತನ್ನನ್ನು ಎಲ್ಲರೂ ಗೌರವಿಸಬೇಕು....' ಹೀಗೆಲ್ಲ ಅಹಂಕಾರ ಪಡುವವರು ಒಂದು ಬಗೆಯ ಜನರಾದರೆ, 'ಸಮಾಜದಲ್ಲಿ ತನಗೆ ಸ್ಥಾನಮಾನಗಳೇ ಇಲ್ಲ. ಎಲ್ಲರ ತಿರಸ್ಕಾರಕ್ಕೆ ಪಾತ್ರನಾಗಿ ಬದುಕುವ ನನ್ನ ಬಾಳ್ವೆಗೆ ಏನು ಪ್ರಯೋಜನ! ಎಂದು ತಮ್ಮ ಬಗ್ಗೆ ಹತಾಶರಾಗಿರುವವರು ಮತ್ತೊಂದು ಬಗೆಯ ಜನರು.

ಪರಸ್ಪರವಾಗಿ ವಿರುದ್ಧ ಸ್ವಭಾವದ ಎರಡು ಬಗೆಯ ಜನರ ದೋಷಗಳನ್ನು ಛಾಂದೋಗ್ಯೋಪನಿಷತ್ತಿನ ಒಂದೇ ಸಂದೇಶ ಪರಿಹರಿಸುವುದು.

**'ಸ ಆತ್ಮಾ ತತ್ತ್ವಮಸಿ....'** ಎಂಬುದೇ ಆ ಸಂದೇಶ.

**ಎರಡು ಅರ್ಥಗಳು:** ಪರಸ್ಪರವಾಗಿ ಅವಿರುದ್ಧಗಳಾದ ಅನೇಕ ಅರ್ಥಗಳನ್ನು ಹೊರಡಿಸಲಾಗುವ ಈ ಮಾತಿನ ಪ್ರಮುಖ ಎರಡು ಅರ್ಥಗಳು. ಜಗತ್ತಿನ ಸೃಷ್ಟ್ಯಾದಿಕರ್ತನಾಗಿ ಪ್ರಸ್ತುತನಾದ ಭಗವಂತನೇ ಆತ್ಮಾ– ಜಗದೊಡೆಯ. ನೀನಾದರೂ ಅವನಿಂದ ಸೃಷ್ಟನಾಗಿ, ಅವನಿಗೆ ಅಧೀನನಾಗಿ, ಅವನ ಆಶ್ರಯದಲ್ಲಿ ಇರುವವನು. ತತ್ ತ್ವಮಸಿ– ಎಂಬಲ್ಲಿಯ ತತ್ ಪದ **'ಸಪ್ತಸು ಪ್ರಥಮಾ'–** ಎಂಬ ವೈದಿಕ ವ್ಯಾಕರಣ ಸೂತ್ರ ಪ್ರಕಾರ ತೃತೀಯಾದಿ ವಿಭಕ್ತ್ಯರ್ಥದ ಪ್ರಥಮಾ ವಿಭಕ್ತಿಯನ್ನು ಹೊಂದಿರುವುದೆಂದು ಇಟ್ಟುಕೊಂಡಾಗ ಆ ಪದದಿಂದ ಅವನಿಗೆ ಅಧೀನ ಇತ್ಯಾದಿ ಅರ್ಥಗಳು ಹೊರಡಬಲ್ಲವು.

ಜಗತ್ ಸೃಷ್ಟ್ಯಾದಿಗಳನ್ನು ನಡೆಸುವ ಸ್ವಾಮಿಯಾದ ಭಗವಂತನೇ ನೀನು ಎಂದು ಸ ಆತ್ಮಾ ತತ್ತ್ವಮಸಿ ಎಂಬ ಮಾತಿನಿಂದ ಮತ್ತೊಂದು ಅರ್ಥವು ಹೊರಡಬಲ್ಲುದು. ಆದರೆ ಜಗತ್ಸೃಷ್ಟ್ಯಾದಿಕರ್ತನಾದ ಭಗವಂತನ ತಾದಾತ್ಮ್ಯ ಜೀವನಿಗೆ ಕೂಡದು. ಆದುದರಿಂದ ಆ ಮಾತು ಭಗವಂತನ ಸಾದೃಶ್ಯವನ್ನು ಜೀವನಲ್ಲಿ ತಿಳಿಸುವುದು. ಜಗತ್ ಸೃಷ್ಟಿಕರ್ತನಾದ ಭಗತವಂತನಿಗೆ ಜ್ಞಾನರೂಪತ್ವಾದಿ ಕೆಲವು ಧರ್ಮಗಳ ವಿಷಯದಲ್ಲಿ ಸದೃಶನಾಗಿರುವವನು ಜೀವನು ಎಂದು.

ಜೀವನು ಭಗವಂತನಿಗೆ ಅಧೀನ ಎಂಬ ಅರ್ಥದಿಂದ ಜೀವನ ಶರೀರ ಮುಂತಾದ



ಪ್ರತಿಯೊಂದು ಪದಾರ್ಥವೂ ಅವನಿಗೆ ಅಧೀನ ಎಂದ ಮೇಲೆ ಅಂತಹ ಶರೀರಾದಿಗಳ ಮಾಧ್ಯಮದಿಂದ ಗಳಿಸಿದ ಕೀರ್ತಿ, ವಿದ್ಯೆ, ಸಂಪತ್ತು ಇತ್ಯಾದಿಗಳ ಬಗ್ಗೆ ಅಹಂಕಾರ ಪಡುವುದು ತಪ್ಪು ಎಂದು ವಿವೇಚನೆ ಮೂಡುವಂತಾದರೆ, ಜ್ಞಾನಾನಂದ ಸ್ವರೂಪಿಯಾದ ಭಗವಂತನಿಗೆ ಸಜ್ಜೀವನು ಪ್ರತಿಬಿಂಬನಾಗಿದ್ದು, ಅಂತಹ ಜ್ಞಾನಾನಂದ ರೂಪದ ವಿಷಯದಲ್ಲಿ ಅವನಿಗೆ ಸದೃಶನಾಗಿರುವವನು. ಅವನಂತೆಯೇ ತನ್ನ ತನ್ನ ಯೋಗ್ಯತಾನುಸಾರವಾಗಿ ಜ್ಞಾನಾನಂದರೂಪವನ್ನು ಪಡೆದಿರುವವನು. ಆದುದರಿಂದ ತಾತ್ಕಲಿಕವಾದ ಸಂಸಾರಾವಸ್ಥೆಯ ಏರುಪೇರುಗಳಿಗೆ ಸ್ಪಂದಿಸಿ ಹತಾಶನಾಗುವುದರಲ್ಲಿ ಅರ್ಥವಿಲ್ಲ ಎಂಬ ವಿವೇಷನೆ ಮೂಡುವುದು.

ಹೀಗೆ **' ಸ ಆತ್ಮಾ ತತ್ತ್ವಮಸಿ'** ಎಂಬ ಒಂದೇ ಸಂದೇಶ ಎರಡು ಬೇರೆ ಬೇರೆ ಅರ್ಥಗಳನ್ನು ಹೊರಡಿಸುವ ಮೂಲಕ ಅಹಂಕಾರಗ್ರಸ್ತ ಜೀವರ ಅಹಂಕಾರವನ್ನೂ ಹತಾಶರಾದ ಜೀವರ ಸ್ವನೈಚ್ಯಾನು ಸಂಧಾನವನ್ನೂ ದೂರಮಾಡಬಲ್ಲದು. *

(....12...ನೇ ಪಟದಿಂದ)

ಅನ್ನವಿತ್ತು ಅದರೊಳಗಿರುವ ದೇವರು ಪ್ರೀತಿರಾಗಲಿ ಎನ್ನಬಹುದಲ್ಲವೇ? ನಾಯಿಯೊಳಗಣ ಜೀವ ಯಾವ ಪಾಪದಿಂದ ಈ ನಾಯಿಜನ್ಮ ಪಡೆದಿರಬಹುದೋ ಅಂತಹ ಪಾಪಗಳನ್ನು ನಾವು ಮಾಡದಿರಲಿ ಎಂದು ಎಚ್ಚರಿಸುವ ಸಲುವಾಗಿಯೇ ಆ ಜೀವನಿಗೆ ದೇವರು ಪಾಪಶೇಷದ ಫಲವಾಗಿ ನಾಯಿಜನ್ಮ ಕೊಟ್ಟಿರುವುದೆಂದು ಚಿಂತಿಸಬಹುದಲ್ಲವೇ?

ಮನೆಯಲ್ಲಿ ನಾಯಿಯನ್ನು ಸಾಕಬಾರದೆಂದು ಹೇಳಿರುವ ಪುರಾಣಇತಿಹಾಸಗಳೇ ನಿರಪರಾಧಿ ನಾಯಿಗೆ ಹಿಂಸೆ ಮಾಡಿದರೆ ಆಗುವ ದುಷ್ಪರಿಣಾಮವೇನೆಂಬುದನ್ನು ಈ ಕಥೆಯ ಮೂಲಕ ತಿಳಿಸಿವೆ. ನಾಯಿಯಲ್ಲಿರುವ ಕೃತಜ್ಞತೆ, ಸ್ವಾಮಿನಿಷ್ಠೆ, ಅಪರಾಧಿಗಳನ್ನು ಪತ್ತೆಹಚ್ಚುವ ಸೂಕ್ಷ್ಮಜ್ಞತೆ, ವೇಗದಓಟ, ಪುಟ್ಟ ಮಕ್ಕಳು ಕಿವಿ, ಬಾಲ ಹಿಡಿದು ಜಗ್ಗಿ ಆಡುತ್ತಿದ್ದರೂ ವ್ಯಗ್ರವಾಗದ ಸಂಯಮಶೀಲತೆ, ಮೋಹ ಬರಿಸುವ ಮುಗ್ದತೆ ಕಳ್ಳಕಾಕರನ್ನು ಗುರುತಿಸಿ ಅಟಕಾಯಿಸಿಕೊಂಡು ಹೋಗುವ ಚುರುಕುತನ ಇದೆಲ್ಲ ದೇವರು ಕೊಟ್ಟ ಬಳುವಳಿ ಎಂದು ನೆನೆಯಬಹುದಲ್ಲವೇ? ನಾಯಿಗೂ ನ್ಯಾಯ ಕೊಟ್ಟ ಶ್ರೀರಾಮನನ್ನು ನೆನೆದು ಪುಣ್ಯವಂತರಾಗಬಹುದಲ್ಲವೇ? ಸುಮ್ಮನೆ ಹೊಡೆದು ಹಿಂಸೆ ಮಾಡಬೇಕೆ?

# ನಾಯಮಾತ್ಮಾ ಪ್ರಚನೇನ ಲಭ್ಯಃ

–ತಿರುಮಲ ಕುಲಕರ್ಣಿ

ಉಪನಿಷತ್ತಿನ ಪ್ರಸಿದ್ಧ ಸಂದೇಶಗಳಲ್ಲಿ ಅಥರ್ವಣದ ಈ ಮಾತು ಅಗ್ರಪಂಕ್ತಿಯಲ್ಲಿ ನಿಲ್ಲುವಂಥದು.

**ನಾಯಮಾತ್ಮಾ ಪ್ರವಚನೇನ ಲಭ್ಯಃ**
**ನ ಮೇಧಯಾ ನ ಬಹುನಾ ಶ್ರುತೇನ ।**
**ಯಮೇವೈಷ ವೃಣುತೇ ತೇನ ಲಭ್ಯಃ**
**ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಂ ॥**

(ಅಥ 6–3)

ಎಲ್ಲ ಸಾಧನೆಗಳ ಗುರು ಭಗವಂತನ ಅಪರೋಕ್ಷ ಜ್ಞಾನ. ಆ ದಾರಿಯಲ್ಲಿ ಸಾಗುವ ವ್ಯಕ್ತಿ ಒಂದೊಮ್ಮೆ ಹಾದಿ ತಪ್ಪುವ ಸಂಭವವಿದೆ. ಅವನನ್ನೂ ಈ ಮಾತು ಎಚ್ಚರಿಸುತ್ತದೆ. ಪರಬ್ರಹ್ಮನನ್ನು ಅರಿಯಲು ಶಬ್ದ ಬ್ರಹ್ಮ ಎನಿಸಿದ ವೇದಾದಿಸಚ್ಛಾಸ್ತ್ರಗಳನ್ನು ಚೆನ್ನಾಗಿ ಅಧ್ಯಯನ ಮಾಡಬೇಕಷ್ಟೆ. ಕೆಲವು ತಾವು ಮಾಡಿದ ಸಚ್ಛಾಸ್ತ್ರಶ್ರವಣವೇ ಮುಖ್ಯತಾರಕ ಎಂದು ತಿಳಿಯಬಹುದು. ಕೆಲವು, ಶ್ರವಣದ ಜೊತೆಗೆ ವಿಲಕ್ಷಣ ಬುದ್ಧಿಮತ್ತೆಯನ್ನು ಪಡೆದಿರಬಹುದು. ಗ್ರಂಥಾನುಗ್ರಂಥಗಳನ್ನೇ ಮಸ್ತಿಷ್ಕದಲ್ಲಿ ಧರಿಸಿದ ಮೇಧಾವಿಯಾಗಿರಬಹುದು. ಅದೇ ಅಪರೋಕ್ಷಜ್ಞಾಜಕ್ಕೆ ಸಾಧನ ಎಂಬ ಭಾವನೆಯೂ ಕೆಲವರಿಗೆ ಇದ್ದೀತು. ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ತಿಳಿದದ್ದನ್ನು, ತಿಳಿದು ಮನನ ಮಾಡಿದ್ದನ್ನು ಶಿಷ್ಯರಿಗೆ, ಜಿಜ್ಞಾಸುಗಳಿಗೆ ಮನದಟ್ಟಾಗುವಂತೆ ತಿಳಿಹೇಳುವ ಪ್ರವಚನಶೈಲಿ ಕೆಲವರಿಗೆ ಕರಗತವಾಗಿದ್ದೀತು. ಆದರೆ, ಈ ವಾಕ್ಯ ಕೇವಲ ಈ ಅಂಶಗಳು ಅಪರೋಕ್ಷಜ್ಞಾನಕ್ಕೆ ಸಾಲವು ಎಂದು ಪೂರ್ವಾರ್ಧದಲ್ಲಿ ಹೇಳಿ, ಉತ್ತರಾರ್ಧದಲ್ಲಿ ಸಾಧನೆಯ ರಹಸ್ಯವನ್ನು ತೆರೆದಿಡುತ್ತದೆ.

ಸಾಧಕ 'ಅವನಿಗೆ' ಏನು ಮಾಡಿದರೆ ಏನು? ಏನು ಕೊಟ್ಟರೇನು? ಸ್ವೀಕರಿಸುವ ಅವನು ಮೊದಲು ಸಾಧಕನನ್ನು ಸ್ವೀಕರಿಸಬೇಕು ಎನ್ನುತ್ತಿದೆ ಉತ್ತರಾರ್ಧ. ಎಲ್ಲರನ್ನೂ ಎಲ್ಲ ಕಾಲಕ್ಕೂ ರಕ್ಷಣೆಗಾಗಿ ಭಗವಂತನು ಸ್ವೀಕರಿಸಿಯೇ ಇರುವುದರಿಂದ ಇಲ್ಲಿ 'ಭಗವಂತನ ಸ್ವೀಕಾರ' ಎಂದರೇನು? ಇದರ ಮರ್ಮವನ್ನು ಬೇಧಿಸಿದ ಆಚಾರ್ಯರು ಇದರ ಆಶಯವನ್ನು ಹೀಗೆ ಹೇಳುತ್ತಾರೆ. ಭಗವಂತನು ಸ್ವೀಕರಿಸುವುದು ಎಂದರೆ 'ನನ್ನವನು ಇವನು' ಎಂದು ಸ್ವೀಕರಿಸುವುದು. ಅರ್ಥಾತ್ 'ಇವನು ನನ್ನ ಭಕ್ತ' ಎಂದು ಸ್ವೀಕರಿಸುವುದು. ಅರ್ಥಾತ್ ಸಾಧಕನ ವಿಷಯದಲ್ಲಿ ಭಗವಂತನು ಪ್ರಸನ್ನನಾಗುವುದು.

**ಗಳಿಸಿದ ಹಣವನ್ನು ಕೇವಲ ವಿಲಾಸ ಜೀವನಕ್ಕಾಗಿಯೇ ಪೋಲು ಮಾಡದಿರಿ,**



ಹೀಗೆ ಭಕ್ತಿ–ಭಗವತ್ಪ್ರಸಾದಗಳು ಅಪರೋಕ್ಷಜ್ಞಾನದ ಪ್ರಧಾನಸಾಧನಗಳು ಎನ್ನುವುದು ಇದರ ಆಶಯ. ಸಾಧನೆಯ ಹೆಜ್ಜೆ–ಹೆಜ್ಜೆಗೂ 'ಅವನು ಮಾಡಿಸಬೇಕು' ಅವನು ಒಲಿಯಬೇಕು. 'ಅವನು ದರ್ಶನ ನೀಡಬೇಕು' ಎಂಬ ಭಾವನೆಯೂ ಇರಬೇಕು. ಹೊರತು, 'ನಾನು ಮಾಡುತ್ತೇನೆ' 'ನಾನು ದರ್ಶನ ಪಡೆಯುತ್ತೇನೆ' ಎಂದಲ್ಲ. ಇದನ್ನು ನಾಲ್ಕನೆಯ ಪಾದ ಸ್ಫುಟಪಡಿಸುತ್ತದೆ. ಈ ಹಿನ್ನಲೆಯಲ್ಲಿ ಪುರಂದರದಾಸರು 'ದಾಸನ್ನ ಮಾಡಿಕೋ ಎನ್ನ' ಎಂದು ಪ್ರಾರ್ಥಿಸಿದ್ದು. 'ಇವನು ನನ್ನ ಭಕ್ತ ದಾಸ' ಎಂದು, ದೇವರು ಅನ್ನಬೇಕು 'ನಾನು ಭಕ್ತ' ಎಂದು ನಾವು ಹೇಳುವುದಲ್ಲ?

ಹಾಗಾದರೆ ಪ್ರವಚನಾದಿಗಳು ವ್ಯರ್ಥವೆ? ಇಲ್ಲ ಎನ್ನುತ್ತದೆ ಮುಂದಿನ ವಾಕ್ಯ

**ನಾಯಮಾತ್ಮಾ ಬಲಹೀನೇನ ಲಭ್ಯಃ**
**ನ ಚ ಪ್ರಮಾದಾತ್ ತಪಸೋ ವ್ಯಾಪ್ಯಲಿಂಗಾತ್ ।**
**ಏತೈರುಪಾಯೈರ್ಯತತೇ ಯಸ್ತು ವಿದ್ವಾನ್**
**ತಸ್ಯೈಷ ಆತ್ಮಾ ವಿಶತೇ ಬ್ರಹ್ಮಧಾಮ ॥**

ಇಲ್ಲಿ ಬಲ ಎಂದರೆ ಸಾಧಕನಿಗೆ ಹೇಳಿದ ಶ್ರವಣ–ಮನನಾದಿ ಹಾಗೂ ಹಿಂದೆ ಹೇಳಿದ ಪ್ರವಚನಭಕ್ತ್ಯಾದಿಗಳೆಲ್ಲವೂ. ಆದ್ದರಿಂದ ಜ್ಞಾನಸಾಧನಗಳಲ್ಲಿ ಯಾವನ್ನೂ ಬಿಡುವಂತಿಲ್ಲ. ಎಲ್ಲವೂ ಬೇಕು. ಅವೆಲ್ಲದರ ಜೊತೆಗೆ ಭಕ್ತಿ ಬೇಕು. ಇವೂ ಅಷ್ಟೆ. ಕೆಲವೊಮ್ಮೆ ಅಲ್ಲ. ಬಿಟ್ಟು ಬಿಡದೆ ಮರೆಯದೆ ನಿರಂತರ ನಡೆಯಬೇಕು. ಬರಿಯ ಜ್ಞಾನದ ಕಡೆ ಗಮನವಲ್ಲ. ತಪಸ್ಸಿಗೂ ಜೀವನದಲ್ಲಿ ಸ್ಥಾನ ನೀಡಬೇಕು. ದೇಹ–ಮನಸ್ಸುಗಳ ದಂಡನೆಗೆ ಕಾರಣವಾಗುವ ಎಲ್ಲ ಆಚರಣೆಗಳೂ ತಪಸ್ಸು ಎನಿಸುತ್ತವೆ. ತಪಸ್ಸಿನ ವಿಷಯದಲ್ಲಿ 'ಪ್ರಮಾಣಸಿದ್ಧವಾದದ್ದನ್ನೇ ಮಾಡುತ್ತೇನೆ' ಎಂಬ ಹಟ ಇರಬಾರದು. ಪ್ರಮಾಣಗಳು ಹೇಳದ, ಸಜ್ಜನರ ಪರಂಪರೆಯಿಂದ ಬಂದ ಆಚರಣೆಗಳಿಗೂ ಸ್ಥಾನ ನೀಡಬೇಕು. ಇದು 'ಅಲಿಂಗಾತ್ ತಪಸಃ' ಎನ್ನುವುದರ ಅರ್ಥ. (ಅಲಿಂಗಾತ್ = ಲಿಂಗೋಪಲಕ್ಷಿತಪ್ರಮಾಣಾನುಕ್ರಾತ್ ತಪಸೋಪೀತ್ಯರ್ಥಃ–ಖಂಡಾರ್ಥ)

ಹೀಗೆ ಈ ಎಲ್ಲ ಸಾಧನೆಗಳ ಮೂಲಕ ಪ್ರಯತ್ನ ಮಾಡುತ್ತಿದ್ದರೆ ಅಂಥವನ ಒಳಗಿನ ವಾಯುದೇವರಲ್ಲಿ ಭಗವಂತನ ಸನ್ನಿಧಾನ ಹೆಚ್ಚಾಗುತ್ತದೆ. (ಇದು ನಾಲ್ಕನೇ ಪಾದದ ಅರ್ಥ.) ತನ್ಮೂಲಕ ಸಾಧನ ಸರಿಯಾದ ದಾರಿಯಲ್ಲಿ ಸಾಗಿ ಅಪರೋಕ್ಷಜ್ಞಾನಕ್ಕೆ ಕಾರಣವಾಗುತ್ತದೆ. ಹೀಗೆ ಉಪನಿಷತ್ತು ತಾನು ಹೇಳುವ ಪ್ರತಿ ಅಂಶಕ್ಕೂ ಪ್ರಾಶಸ್ತ್ಯ ನೀಡಿ ಅವೆಲ್ಲದಕ್ಕಿಂತ ಮುಖ್ಯ ಭಕ್ತಿ. ಅದರ ಕಡೆ ಗಮನವಿಡುವ ಸಾಧಕನ ಮೋಕ್ಷ ದಾರಿ ತಪ್ಪುವುದಿಲ್ಲ ಎಂದು ಸಂದೇಶಿಸುತ್ತಿದೆ. ★

**ಬಂದ ಹಣದಲ್ಲಿ ಸ್ವಲ್ಪ ಭಾಗವನ್ನು ಧಾರ್ಮಿಕ ಕಾರ್ಯಕ್ಕಾಗಿ, ಬಡಬಗ್ಗರಿಗಾಗಿ ವಿನಿಯೋಗಿಸಿ.**

# ಪ್ರಾತಃ ಸ್ಮರಣೀಯ ಶ್ರೀವಿದ್ಯಾಮಾನ್ಯತೀರ್ಥರ ಅಷ್ಟಮ ಸಮಾರಾಧನೆ

–ಸಗ್ರಿ

ಪ್ರಾತಃಸ್ಮರಣೀಯರಾದ ಶ್ರೀವಿದ್ಯಾಮಾನ್ಯತೀರ್ಥರ ಎಂಟನೆಯ ಸಮಾರಾಧನೆ ಪಲಿಮಾರಿನ ಅವರ ಮೂಲವೃಂದಾವನದ ಸನ್ನಿಧಿಯಲ್ಲಿ ಸರ್ವಮೂಲಪಾಠ, ಆನಂದಮಯಾಧಿಕರಣದ ವಿದ್ವದ್ಗೋಷ್ಠಿ, ಭಗವದ್ಗೀತೆಯ ಹದಿನೆಂಟು ಅಧ್ಯಾಯಗಳ ಕುರಿತ ಪ್ರವಚನ–ಈ ಆಧ್ಯಾತ್ಮಿಕ ಚಟುವಟಿಕೆಗಳಿಂದಲೂ, ಮುಖ್ಯಪ್ರಾಣನ ರಂಗಪೂಜೆ, ಗುರುಸಂಸ್ಮರಣೆ, ಭಜನೆ, ಹರಿಕಥೆ, ಅನ್ನಸಂತರ್ಪಣೆ ಈ ಧಾರ್ಮಿಕ ಚಟುವಟಿಕೆಗಳಿಂದಲೂ, ಪೂಜೆ ಪುರಸ್ಕಾರರೂಪದ ಭಾವುಕತೆಯ ಚಟುವಟಿಕೆಗಳಿಂದಲೂ ಹರಿಗುರುಗಳು ಮೆಚ್ಚುವಂತೆ ನಡೆಯಿತು. 10–05–2008ರಿಂದ 16–05–2008ರವರೆಗೆ ಸಪ್ತಾಹಾವಧಿಯಲ್ಲಿ ಪಲಿಮಾರುಮಠದ ಶ್ರೀವಿದ್ಯಾಧೀಶತೀರ್ಥರ ನೇತೃತ್ವದಲ್ಲಿ ನಡೆದ ಸಮಾರಾಧನೆಗೆ 07–05–2008ರಂದು ಏಕವಾಟದ ತಾಂತ್ಯಮಠದಲ್ಲಿ ಶ್ರೀವಿದ್ಯಾಧೀಶತೀರ್ಥರಿಂದ ಯಶಸ್ವಿಯಾಗಿ ನಡೆದ ಮಹಾವಿಷ್ಣುವಿನ ಪುನಃ ಪ್ರತಿಷ್ಠೆ ಹಾಗೂ ಕುಂಭಾಭಿಷೇಕ ಹರಿಗುರುಗಳ ಪೂರ್ಣಾನುಗ್ರಹವನ್ನು ಸೂಚಿಸಿದಂತಿತ್ತು.

ಸರ್ವಮೂಲಪಾಠ ಪ್ರಶಿಕ್ಷಣ ಶಿಬಿರ:

ಸಪ್ತಾಹಾವಧಿಯ ಸಮಾರಾಧನೆ ಆರಂಭಗೊಂಡದ್ದು ಸರ್ವಮೂಲಗ್ರಂಥಗಳ ಪಾಠದೊಂದಿಗೆ. ಚೆನ್ನೈನ ಸುಮಾರು ನೂರು ಜಿಜ್ಞಾಸುಗಳು ಪಾಲ್ಗೊಂಡಿದ್ದ ಈ ಪ್ರಶಿಕ್ಷಣಶಿಬಿರದಲ್ಲಿ ಮುಖ್ಯವಾಗಿ ಎ. ಹರಿದಾಸಭಟ್ಟರು ವಿಷ್ಣುತತ್ವವಿನಿರ್ಣಯದ ಪಾಠವನ್ನು ನಡೆಸಿದ್ದರು. 10–05–2008ರಿಂದ 13–05–2008ರವರೆಗೆ ಪ್ರತಿನಿತ್ಯ ಐದಾರು ತಾಸುಗಳ ಅವಧಿಯಲ್ಲಿ ನಡೆಸಲಾಗಿದ್ದ ಈ ಪಾಠದಲ್ಲಿ ವಿಷ್ಣುತತ್ವವಿನಿರ್ಣಯ ಭೇದಘಟ್ಟದವರೆಗೆ ಶಿಕ್ಷಣ ನೀಡಲಾಗಿತ್ತು. ಇದಲ್ಲದೆ, ಸುಮಾರು ಹದಿನೆಂಟು ವಿದ್ವಾಂಸರು ಸರ್ವಮೂಲದ ಬೇರೆ ಬೇರೆ ಕೃತಿಯ ಬಗ್ಗೆ ಸುಮಾರು ನಲ್ವತ್ತೈದು ನಿಮಿಷಗಳ ಅವಧಿಯಲ್ಲಿ ಪ್ರವಚನವನ್ನು ನೀಡಿದ್ದರು.

**ಸದಾಗಮೈಕವಿಜ್ಞೇಯ:** 14–05–2008ರಂದು ಸರ್ವಮೂಲಗ್ರಂಥಗಳ ಪಾಠಪ್ರವಚನದ ಮಂಗಲೋತ್ಸವ ನಡೆದಿದ್ದು ಹರಿದಾಸಭಟ್ಟರು ಅದರ ಅಂಗವಾಗಿ ವಿಷ್ಣುತತ್ವವಿನಿರ್ಣಯದ ಅನುವಾದ ನಡೆಸಿದ್ದರು. ಕಾಣಿಯೂರು ಮಠದ ಶ್ರೀವಿದ್ಯಾವಲ್ಲಭತೀರ್ಥರು ಅನುಗ್ರಹಸಂದೇಶ ನೀಡಿದರು. ಶ್ರೀವಿದ್ಯಾಧೀಶತೀರ್ಥರು ವಿಷ್ಣುತತ್ವವಿನಿರ್ಣಯದ ಮಂಗಲಾಚರಣೆಯ 'ಸದಾಗಮೈಕವಿಜ್ಞೇಯಂ.....' ಎಂಬ ಮಾತು ಅಪೌರುಷೇಯತ್ವ,

ಹೆಂಡತಿ ಮಕ್ಕಳಿಗೆ ಹಿತೋಪದೇಶವನ್ನು ಮಾಡುತ್ತಾ ಕುಟುಂಬವನ್ನು ಸಾಗಿಸುತ್ತಿರಿ.



ವಾಯುದೇವಮೂಲಕತ್ವ ಮುಂತಾದ ಅರ್ಥವಿಶೇಷಗಳನ್ನು ಹೊರಹೊಮ್ಮಿಸುವ ಮೂಲಕ ಭಗವಂತನ ಸಚ್ಛಾಸ್ತ್ರಪ್ರತಿಪಾದ್ಯತ್ವದ ವ್ಯಾಪ್ತಿಯ ಬಗ್ಗೆ ಹೇಗೆ ಬೆಳಕು ಚೆಲ್ಲುತ್ತಿದೆ ಎಂದು ವಿವರಿಸಿದರು. ಮಂತ್ರಾಲಯ ಶ್ರೀರಾಘವೇಂದ್ರಮಠದ ಶ್ರೀಸುಯತೀಂದ್ರತೀರ್ಥಶ್ರೀಪಾದರು ಉಪಸ್ಥಿತರಿದ್ದರು.

**ಆನಂದಮಯಾಧಿಕರಣದ ಗೋಷ್ಠಿ:** ಶ್ರೀ ಪಿ.ಎಸ್. ಶೇಷಗಿರಿರಾವ್ ಹಾಗೂ ಶ್ರೀ ಡಿ. ಪ್ರಹ್ಲಾದಾಚಾರ್ಯ ಇವರ ನಿರ್ವಾಹಕಾಧ್ಯಕ್ಷತೆಯಲ್ಲಿ ಆನಂದಮಯಾಧಿಕರಣದ ಕುರಿತು ಗೋಷ್ಠಿ ನಡೆಯಿತು. ಶ್ರೀಹರಿದಾಸಭಟ್ಟರ ಮಾರ್ಗದರ್ಶನದಲ್ಲಿ ಪೂರ್ಣಪ್ರಜ್ಞವಿದ್ಯಾಪೀಠದ ಯುವವಿದ್ವಾಂಸರು ನಡೆಸಿಕೊಟ್ಟ ಈ ಗೋಷ್ಠಿಯಲ್ಲಿ ಸಿದ್ಧಾಂತಾನುಸಾರವಾಗಿ ಆನಂದಮಯಾಧಿಕರಣದ ಆಶಯ, ಚಂದ್ರಿಕಾಪ್ರಕಾಶದಲ್ಲಿ ಮಾಡಲಾದ ಇದರ ಸಮರ್ಥನೆ ಹಾಗೂ ಪರಕೀಯ ಮತನಿರಾಕರಣೆ ಇವುಗಳಿಗೆ ಸಂಬಂಧಿಸಿದಂತೆ ಶಂಕರಪಾದಭೂಷಣದಲ್ಲಿ ಮಾಡಲಾದ ವಿಮರ್ಶೆ ಅದರ ಯುಕ್ತಾಯುಕ್ತತೆಯ ಸಮಾಲೋಚನೆ, ಹಾಗೆಯೇ ಚಂದ್ರಿಕಾಪ್ರಕಾರದ ಆಶಯದ ಮೇಲೆ ತತ್ವಮಾರ್ತಾಂಡದಲ್ಲಿ ನಡೆಸಲಾದ ವಿಮರ್ಶೆ, ಅದರ ಯುಕ್ತಾಯುಕ್ತತೆಯ ಪರ್ಯಾಲೋಚನೆ ಹೀಗೆ ಆದಷ್ಟು ಕ್ರಮಬದ್ಧವಾಗಿ ವಿಷಯಪ್ರಸ್ತಾವ, ಚರ್ಚೆ ನಡೆದಿತ್ತು. ಸ್ವಮತೀಯ ವಿದ್ವಾಂಸರಷ್ಟೇ ಸೇರಿದ್ದರಿಂದ ಸಿದ್ಧಾಂತಾನುಸಾರಿ ವ್ಯಾಖ್ಯಾನವನ್ನೂ ಚಂದ್ರಿಕಾಪ್ರಕಾಶದ ಪ್ರತಿಪಾದನೆಯನ್ನೂ ಮುಕ್ತವಾಗಿ ಚರ್ಚಿಸಿ ತೀರ್ಮಾನಿಸಿಕೊಳ್ಳಲು ಅನುಕೂಲವಾಯಿತು.

ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಶ್ರೀವಿದ್ಯಾಧೀಶತೀರ್ಥರು 'ಆನಂದಮಯೋಭ್ಯಾಸತಾತ್' ಎಂಬ ಬ್ರಹ್ಮಸೂತ್ರದಲ್ಲಿ ಬ್ರಹ್ಮಶಬ್ದಾಭ್ಯಾಸವನ್ನು ಯುಕ್ತಿಯನ್ನಾಗಿಟ್ಟುಕೊಂಡು ಸಮರ್ಥಿಸಲಾದ ಬ್ರಹ್ಮತ್ವವು ಸಿದ್ಧಾಂತದಲ್ಲಿ ಪ್ರತಿಪಾದಿಸಿರುವಂತೆ ಬ್ರಹ್ಮಶಬ್ದಾಭ್ಯಾಸ ಎಂಬ ಯುಕ್ತಿಯನ್ನು ಸಮಾನವಾಗಿ ಹೊಂದಿರುವ ಅನ್ನಮಯವೇ ಮುಂತಾದ ಐದುರೂಪಗಳಿಗೂ ಸಂಬಂಧಿಸುವುದೇ ಸಮುಚಿತ ಹೊರತು ಶಾಂಕರಭಾಷ್ಯದಲ್ಲಿ ತಿಳಿಸಿರುವಂತೆ ಅನ್ನಮಯಾದಿ ಯಾವುದೇ ಬ್ರಹ್ಮ ಅಲ್ಲ ಎಂಬುದೂ ಅನುಚಿತ. ರಾಮಾನುಜೀಯ ಭಾಷ್ಯದಲ್ಲಿ ಅರ್ಥೈಸಿರುವಂತೆ ಆನಂದಮಯ ಮಾತ್ರವೇ ಬ್ರಹ್ಮ ಹೊರತು ಅನ್ನಮಯಾದಿಗಳು ಬ್ರಹ್ಮ ಅಲ್ಲ ಎಂಬುದೂ ಅನುಚಿತ ಎಂಬುದಾಗಿ 'ಅಭ್ಯಾಸ' ಎಂಬ ಹೇತುವಿನ ಹಿನ್ನೆಲೆಯಲ್ಲಿ ಪರ್ಯಾಲೋಚಿಸಿದಾಗ ಸಿದ್ಧಾಂತಾನುಸಾರಿ ವ್ಯಾಖ್ಯಾನವೇ ಸೂತ್ರಕ್ಕೆ ಸಮ್ಮತವೆಂದು ಸ್ಪಷ್ಟವಾಗುವುದೆಂದು ಸಮರ್ಥಿಸಿದರು.

**ಭಗವದ್ಗೀತಾ ಚಿಂತನ:** 15–05–2008ರಂದು ಬೆಳಗ್ಗಿನಿಂದ ರಾತ್ರಿಯವರೆಗೆ ಹದಿನೆಂಟು ಊರ ಹಾಗೂ ಪರವೂರ ವಿದ್ವಾಂಸರ ಮೂಲಕ ಭಗವದ್ಗೀತೆಯ ಹದಿನೆಂಟು

ಭಾರತೀಯ ಸಂಸ್ಕೃತಿ–ವಿದ್ಯೆಗಳನ್ನು ಕಲಿಯಲು ತೊಡಗಿರಿ.

ಅಧ್ಯಾಯಗಳ ಕುರಿತಾದ ಪ್ರವಚನಗಳು ನಿರಂತರವಾಗಿ ನಡೆದವು. ಹೆಚ್ಚಿನ ಪ್ರವಚನಗಳಲ್ಲಿ ಸ್ವಂತಿಕೆ ಎದ್ದು ಕಾಣುತ್ತಿತ್ತು.

**ಗುರುಗಳ ಪುಣ್ಯಸ್ಮರಣೆ:** ಅಂದು ರಾತ್ರಿ 7.00 ಗಂಟೆಗೆ ಸರಿಯಾಗಿ ಎಂಟು ವರ್ಷಗಳ ಹಿಂದೆ ಶ್ರೀವಿದ್ಯಾಮಾನ್ಯತೀರ್ಥರು ಉಡುಪಿ ಶ್ರೀಕೃಷ್ಣಮುಖ್ಯಪ್ರಾಣರ ಸನ್ನಿಧಿಯಲ್ಲಿ ಮಹಾಪ್ರಸ್ಥಾನ ಕೈಗೊಂಡಿದ್ದರ ಪುಣ್ಯಸ್ಮರಣೆಯ ಹಿನ್ನೆಲೆಯಲ್ಲಿ ಶ್ರೀಪಾದರ ವ್ಯಕ್ತಿತ್ವದ ಸಾಧನೆಯ ವಿಚಾರಧಾರೆಯ ಕೊಡುಗೆಯ ಸಿಂಹಾವಲೋಕನವನ್ನು ಅವರ ಮೂಲವೃಂದಾವನದ ಸಮಕ್ಷಮದಲ್ಲಿ ನಡೆಸಲಾಯಿತು.

**ಪೇಜಾವರಸ್ವಾಮಿಗಳು ಹೀಗಿರುತ್ತಿರಲಿಲ್ಲ**

ಪೇಜಾವರ ಮಠದ ಶ್ರೀವಿಶ್ವೇಶತೀರ್ಥರು ತಮ್ಮ ಗುರುಗಳಾದ ಶ್ರೀವಿದ್ಯಾಮಾನ್ಯತೀರ್ಥರು ತಮಗೆ ನ್ಯಾಯಶಾಸ್ತ್ರದಲ್ಲೂ ಆಸಕ್ತಿ ಉಂಟಾದುದೇ ಮುಂತಾದ ವಿಷಯಗಳಲ್ಲಿ ಗಾಢಪ್ರಭಾವ ಬೀರಿದ್ದುದನ್ನು ಭಾವುಕರಾಗಿ ಸ್ಮರಿಸಿಕೊಂಡು, 'ಒಟ್ಟಲ್ಲಿ ಶ್ರೀವಿದ್ಯಾಮಾನ್ಯತೀರ್ಥರ ಸರಿಯಾದ ಮಾರ್ಗದರ್ಶನವಲ್ಲದಿದ್ದರೆ ಈಗಿನ ಈ ಪೇಜಾವರಸ್ವಾಮಿಗಳು ಹೀಗೆ ಇರಲು ಸಾಧ್ಯವೇ ಇರುತ್ತಿರಲಿಲ್ಲ' ಎಂದು ಉದ್ಘೋಷಿಸಿದರು.

**ಸರ್ವಜ್ಞಾನಕ್ಕೆ ಬೇಕಾದ ಸಾದೃಶ್ಯಜ್ಞಾನ**

ಗುರುಗಳಿಗೆ ಶಾಸ್ತ್ರಾರ್ಥ ಚಿಂತನೆ ಇಷ್ಟವಾದುದೆಂದು ಗುರುಗಳ ಸಂತೋಷಕ್ಕಾಗಿ ಶ್ರೀವಿಶ್ವೇಶತೀರ್ಥರು ತಾವು ವಿದ್ಯಾರ್ಥಿಯಾಗಿದ್ದಾಗ ಶ್ರೀವಿದ್ಯಾಮಾನ್ಯತೀರ್ಥರು ಪರಿಷ್ಕರಿಸಿದ್ದ ಶಾಸ್ತ್ರಾರ್ಥಚಿಂತನೆಯೊಂದನ್ನು ಪ್ರಸ್ತುತಪಡಿಸಿದರು.

ಛಾಂದೋಗ್ಯೋಪನಿಷತ್ತಿನಲ್ಲಿ ಬಂದಿರುವ 'ಏಕವಿಜ್ಞಾನದಿಂದ ಸರ್ವವಿಜ್ಞಾನವನ್ನು ಸಿದ್ಧಾಂತಾನುಸಾರವಾಗಿ ಪ್ರಾಧಾನ್ಯ ಹಾಗೂ ಸಾದೃಶ್ಯದ ಹಿನ್ನೆಲೆಯಲ್ಲಿ ಸಮರ್ಥಿಸಲಾಗುವುದು. ಸದೃಶವಾದ ಒಂದು ವಸ್ತುವಿನ ಜ್ಞಾನದಿಂದ ಸದೃಶವಾದ ಮತ್ತೊಂದು ವಸ್ತುವಿನ ಜ್ಞಾನ ಬಂದಂತೆಯೇ ಎನ್ನುವುದಾದರೆ ಸದೃಶರಾದ ಭಗವಂತನ ಜ್ಞಾನದಿಂದ ಅವರಿಗೆ ಸದೃಶ್ಯವಾದ ಜಗತ್ತಿನ ಜ್ಞಾನದಿಂದ ಅವನ ಜ್ಞಾನವೂ ಬರಬೇಕಾದೀತು ತಾನೆ? ಎಂದ ಸಂದೇಹ ಸಹಜ.

ಆದರೆ ಭಗವಂತನಿಗೆ ಜಗತ್ತಿನ ಎಲ್ಲ ವಸ್ತುಗಳೂ ಸದೃಶವಾದವುಗಳು, ಅಂತಹ ಎಲ್ಲವುಗಳ ಜ್ಞಾನದಿಂದಷ್ಟೇ ಭಗವಂತನ ಜ್ಞಾನಬಂದೀತೇ ವಿನಹ ಯಾವುದೋ ಒಂದು ಸದೃಶ ವಸ್ತುವಿನ ಜ್ಞಾನದಿಂದಲ್ಲ. ಮೃಗಾಲಯದಲ್ಲಿಯ ಎಲ್ಲ ಪ್ರಾಣಿಗಳ ಜ್ಞಾನದಿಂದ ಉಳಿದೆಲ್ಲ ಸದೃಶ ಪ್ರಾಣಿಗಳ ಜ್ಞಾನ ಹೇಗೆ ಬಂದಂತಾಗುವುದೋ ಹಾಗೆ. ಒಂದು ಸದೃಶ ಪ್ರಾಣಿಯ ಜ್ಞಾನದಿಂದ ಮೃಗಾಲಯದಲ್ಲಿಯ ಎಲ್ಲ ಸದೃಶಪ್ರಾಣಿಗಳ ಜ್ಞಾನ ಹೇಗೆ



ಬರಲಾರದೋ ಹಾಗೆ ಜಗತ್ತಿನ ಯಾವುದೋ ಒಂದು ಸದೃಶಪದಾರ್ಥ ಜ್ಞಾನದಿಂದ ಸಕಲಪದಾರ್ಥಗಳ ಸಾದೃಶ್ಯವನ್ನು ಹೊಂದಿರುವ ಭಗವಂತನ ಜ್ಞಾನ ಬರಲಾರದು.

ಇದು ಶ್ರೀವಿದ್ಯಾಮಾನ್ಯತೀರ್ಥರು ನಡೆಸಿದ್ದ ಚಿಂತನೆ ಎಂದು ಶ್ರೀವಿಶ್ವೇಶತೀರ್ಥರು ಪ್ರಸ್ತಾಪಿಸಿದ್ದರು.

**ಶ್ರೀವಿದ್ಯಾಮಾನ್ಯತೀರ್ಥರ ಅಭಯಸ್ವಭಾವ:**

ಶ್ರೀವಿದ್ಯಾಧೀಶತೀರ್ಥರು 'ಅಭಯಂ ಸತ್ವಸಂಶುದ್ಧಿ....' ಇತ್ಯಾದಿಯಾಗಿ ದೈವೀಸಂಪತ್‌ಸಂಪನ್ನರ ಮೊತ್ತಮೊದಲ ಗುಣವಾಗಿ ಗೀತೆಯಲ್ಲಿ ಉಲ್ಲೇಖಿಸಲ್ಪಟ್ಟಿರುವ 'ಅಭಯ' ತಮ್ಮ ಗುರುಗಳಲ್ಲಿ ವಿಶೇಷವಾಗಿ ಇತ್ತೆಂಬುದನ್ನು ಘೋಷಿಸಿ, ಶ್ರೀಪಾದರ ಪ್ರತಿಯೊಂದು ಚಟುವಟಿಕೆಯ ಹಿನ್ನೆಲೆಯಲ್ಲೂ 'ಅಭಯ' ಇದ್ದುದನ್ನು ಗುರುತಿಸಿಕೊಟ್ಟರು. ಶೃಂಗೇರಿ ಮುಂತಾದೆಡೆಯ ಪರಕೀಯಮಠಗಳಿಗೆಯೇ ಹೋಗಿ ಅಲ್ಲಿ ಪರಮತದ ಲೋಪದೋಷಗಳನ್ನು ಎತ್ತಿ ತೋರಿಸಿ ತಮ್ಮ ಸಿದ್ಧಾಂತಾನುಗುಣವಾದ ಆಶಯವನ್ನು ಸ್ಪಷ್ಟಪಡಿಸುವಲ್ಲಿಯ ಶ್ರೀಪಾದರ 'ಅಭಯ' ಉಲ್ಲೇಖಾರ್ಹ ಎಂದು ಸಾರಿದರು.

**ಗೀತೆಯಲ್ಲಿ ಕ್ರಿಶ್ಚಿಯನ್ನಾದಿಗಳ ನಿರಾಕರಣೆ:**

ಪೇಜಾವರಮಠದ ಶ್ರೀವಿಶ್ವಪ್ರಸನ್ನತೀರ್ಥರು ಶ್ರೀವಿದ್ಯಾಮಾನ್ಯತೀರ್ಥರ ಪ್ರೀತಿಗಾಗಿ ಅವರ ಮಾಯಾವಾದ ಖಂಡನಕೃತಿಯ ಕುರಿತಾದ ಶ್ಲೋಕಾತ್ಮಕಕೃತಿಯೊಂದರಲ್ಲಿ ಕ್ರಿಶ್ಚಿಯನ್‌ಮತವನ್ನೂ ಮುಸಲ್ಮಾನಮತವನ್ನೂ ಗೀತೆಯ 'ದ್ವಾವಿಮ್..' ಇತ್ಯಾದಿ ಮಾತಿನಿಂದ ನಿರಾಕರಿಸಲಾಗಿರುವುದನ್ನು ತೋರಿಸಿಕೊಟ್ಟರು.

ಈ ಲೋಕದಲ್ಲಿ ಕ್ರಿಶ್ಚಿಯನ್ನನ್ನು ಪ್ರಚುರಗೊಳಿಸಿರುವ ಏಸುಕ್ರಿಸ್ತನ್ನೂ ಮುಸಲ್ಮಾನಮತವನ್ನು ಪ್ರಸ್ತುತಪಡಿಸಿರುವ ಮಹಮ್ಮದ್‌ನನ್ನೂ ಕ್ಷರ ಹಾಗೂ ಅಕ್ಷರ ಪುರುಷರನ್ನಾಗಿ ಪರಿಚಯಿಸಿಕೊಟ್ಟು ಅವರಿಬ್ಬರಿಗಿಂತಲೂ ಭಗವಂತನು ಉತ್ತಮನು, ಯಾಕೆಂದರೆ ಅವರು ದೇವದೂತರಷ್ಟೇ ಆಗಿದ್ದರೆ ಭಗವಂತನು ಸಾಕ್ಷಾತ್ ದೇವ.
ಆದುದರಿಂದ ದೇವನ ಮಾತಿಗೆ ವಿರುದ್ಧವಾಗಿ ದೇವದೂತರ ಮಾತುಗಳು ಬಂದರೆ ಅವುಗಳನ್ನು ದೂರ ಮಾಡಿ ದೇವನ ಮಾತಿಗೇ ಮಾನ್ಯತೆ ನೀಡಬೇಕು. ಎಂದು ಆಕೃತಿಯಲ್ಲಿ ಪ್ರತಿಪಾದಿಸಲಾಗಿದೆ.

**ಶ್ರೀವಿದ್ಯಾಮಾನ್ಯತೀರ್ಥರ ಅನುಗ್ರಹದ ಬಲ:**

ಮಾಧ್ವಪ್ರಯಾಗಮಠದ ಶ್ರೀವಿದ್ಯಾತ್ಮತೀರ್ಥರು ತಮ್ಮ ಮೂಲಕ ಪ್ರಯಾಗಾದಿಗಳಲ್ಲಿ ನಡೆದ ಮಾಧ್ವಸಿದ್ಧಾಂತಪ್ರಸಾರ ಚಟುವಟಿಕೆಗಳನ್ನು ಪರಿಚಯಿಸಿಕೊಟ್ಟು, ನೇಪಾಳದ ವಹಾರತೀರ್ಥದ ಸಮೀಪ ಮಾಧ್ವಮಠದ ಸ್ಥಾಪನೆಗಾಗಿ ಒಂದು ಎಕ್ರೆ ಭೂಮಿಯನ್ನು ಸರಕಾರದಿಂದ ಕೊಡಿಸುವುದಾಗಿ ಅಲ್ಲಿಯ ಒಬ್ಬ ಯತಿಗಳು ಹೇಳಿರುವುದನ್ನು ಉಲ್ಲೇಖಿಸಿ

ಈ ಎಲ್ಲ ಸಾಧನೆಗಳು ಶ್ರೀವಿದ್ಯಾಮಾನ್ಯತೀರ್ಥರ ಅನುಗ್ರಹದ ಬಲದಿಂದಲೇ ನಡೆದಿವೆ ಎಂದು ಸಾರಿದರು.

**ರಾಮಕೃಷ್ಣ ಸ್ಮರಣೆ:** ರಾತ್ರಿ 7.30ಕ್ಕೆ ಶ್ರೀವಿದ್ಯಾಮಾನ್ಯತೀರ್ಥರು ಮಹಾಪ್ರಸ್ಥಾನ ಕೈಗೊಂಡ ಕ್ಷಣ ಎಂದು ಆ ಅವಧಿಯಲ್ಲಿ ಸಾಮೂಹಿಕವಾಗಿ **'ಶ್ರೀರಾಮಶ್ರೀ' 'ಶ್ರೀಕೃಷ್ಣಶ್ರೀ'** ಎಂದು ಪಠಿಸುವ ಮೂಲಕ ಶ್ರೀವಿದ್ಯಾಮಾನ್ಯತೀರ್ಥರ ವ್ಯಕ್ತಿತ್ವವನ್ನು ರೂಪಿಸಿದ ಭಂಡಾರಕೇರಿ ಮಠದ ಶ್ರೀರಾಮಚಂದ್ರನನ್ನೂ, ಪಲಿಮಾರುಮಠದ ಶ್ರೀರಾಮಚಂದ್ರನನ್ನೂ, ಉಡುಪಿ ಶ್ರೀಕೃಷ್ಣನನ್ನೂ ಸ್ಮರಿಸಲಾಯಿತು.

ಹರಿದಾಸರತ್ನ ಮಂಡ್ಯ ಗುರುರಾಜದಾಸರಿಂದ 'ಶ್ರೀಕೃಷ್ಣರಾಯಭಾರ' ದ ಬಗ್ಗೆ ಹರಿಕಥೆ ನಡೆದ ಬಳಿಕ ಭಜನಾಮಂಡಳಿಗಳ ದಾಸವಾಣಿ ಕಾರ್ಯಕ್ರಮದೊಂದಿಗೆ ಏಕಾದಶೀ ಜಾಗರಣೆ ಆಚರಿಸಲಾಯಿತು.

**ಶೋಭಾಯಾತ್ರೆ:** ದ್ವಾದಶಿಯಂದು ಪಲಿಮಾರುಮಠದ ಶ್ರೀರಾಮಚಂದ್ರನ, ಪೇಜಾವರಮಠದ ಶ್ರೀರಾಮವಿಟ್ಠಲರ ಮಹಾಪೂಜೆ ನಡೆದ ಬಳಿಕ ಮಹಾಸಂತರ್ಪಣೆ ಜರಗಿತು. ಆ ಬಳಿಕ ಸರ್ವಮೂಲಗ್ರಂಥಗಳ ಹಾಗೂ ಶ್ರೀವಿದ್ಯಾಮಾನ್ಯತೀರ್ಥರ ಭಾವಚಿತ್ರದ ಮೆರವಣಿಗೆ ನಡೆಯಿತು.

**ವಿದ್ಯಾಮಾನ್ಯಪ್ರಶಸ್ತಿ ಪ್ರಧಾನ:** ಬಳಿಕ ಸುಮಾರು ಹದಿನೈದು ಊರ ಹಾಗೂ ಪರವೂರ ಸಾಧಕರು ಶ್ರೀವಿದ್ಯಾಮಾನ್ಯತೀರ್ಥರ ಪಾಠಕ್ರಮ ಮುಂತಾದ ಬೇರೆ ಬೇರೆ ವಿಷಯದ ಬಗ್ಗೆ ಮಾತನಾಡಿ ಗುರುಸಂಸ್ಮರಣೆಯನ್ನು ನಡೆಸಿದರು.

ಶ್ರೀವಿಶ್ವೇಶತೀರ್ಥರು ಪಾದೂರು ವೇಂಕಟರಮಣ ಐತಾಳರಿಗೆ ವಿದ್ಯಾಮಾನ್ಯಪ್ರಶಸ್ತಿಯನ್ನು ನೀಡಿ ಅನುಗ್ರಹಿಸಿದರು. ಪ್ರಶಸ್ತಿಯ ಅಂಗವಾಗಿ ರಜತದ ಪ್ರಶಸ್ತಿಯ ಪತ್ರಯವನ್ನೂ, ಒಂದು ಲಕ್ಷ ರೂ. ಮೊತ್ತವನ್ನೂ ನೀಡಲಾಯಿತು. ಶ್ರೀಐತಾಳರು ಶ್ರೀವಿಶ್ವೇಶತೀರ್ಥರಿಗೆ ಸಹಪಾಠಿಗಳಾಗಿ, ಮುಂದೆ ಬೆಂಗಳೂರಿನ ಪೂರ್ಣಪ್ರಜ್ಞ ವಿದ್ಯಾಪೀಠದ ಮೊದಲ ಅಧ್ಯಾಪಕರಾಗಿ, ಮತ್ತೆ ಉಡುಪಿ ಸಂಸ್ಕೃತ ಮಹಾಪಾಠಶಾಲೆಯ ವೇದಾಂತಪ್ರಾಧ್ಯಾಪಕರಾಗಿ, ಬಳಿಕ ಪಲಿಮಾರಿನ ಯೋಗಿದೀಪಿಕಾದಲ್ಲಿ ಪ್ರಾಧ್ಯಾಪಕರಾಗಿ ಸಲ್ಲಿಸಿದ ವಾಙ್ಮಯಸೇವೆಯನ್ನು ಶ್ರೀವಿಶ್ವೇಶತೀರ್ಥರೂ, ಶ್ರೀ ವಿದ್ಯಾಧೀಶತೀರ್ಥರೂ ಉಲ್ಲೇಖಿಸಿದರು.

ವ್ಯಕ್ತಿತ್ವಕ್ಕೆ ಒಗ್ಗುವ ಕಾರ್ಯಕ್ರಮಗಳು

ಹೀಗೆ ಶ್ರೀವಿದ್ಯಾಮಾನ್ಯತೀರ್ಥರ ಎಂಟನೆಯ ಸಮಾರಾಧನಾಪ್ರಯುಕ್ತ ಸಪ್ತಾಹಾವಧಿಯಲ್ಲಿ ನಡೆದಿದ್ದ ಕಾರ್ಯಕ್ರಮಗಳು ಶ್ರೀಪಾದರ ವೈಚಾರಿಕತನದ, ಭಾವುಕತನದ ವ್ಯಕಿತ್ವಕ್ಕೆ ಒಗ್ಗುವಂತಾಗಿದ್ದವು. *

**ಭಗವದ್ಗೀತೆ-ವಿಷ್ಣುಸಹಸ್ರನಾಮ-ಕೃಷ್ಣಾಷ್ಟೋತ್ತರವನ್ನು ಎಂದಿಗೂ ಬಿಡಬೇಡಿ.**



(....26...ನೇ ಪಟದಿಂದ)

ಕೇವಲ ಜಡದಿಂದ ಏನೇನೂ ನಿರ್ಮಾಣಗೊಂಡಿದ್ದು ಇಲ್ಲಿಯವರೆಗೆ ಕಂಡಿಲ್ಲ. ಬಟ್ಟೆ ನಿರ್ಮಾಣದ ಹಿಂದೆ ನೇಕಾರನ ಇಚ್ಛೆ ಇದೆ. ಮಡಿಕೆ ನಿರ್ಮಾಣದ ಹಿಂದೆ ಕುಂಬಾರನ ಇಚ್ಛೆ ಇದೆ. ಹಾಗೆಯೇ ಜಗತ್ತಿನ ಸೃಷ್ಟಿಯ ಹಿಂದೆಯು ಹಿರಿಯ ಚೇತನದ ಇಚ್ಛೆ ಇದೆ. ಅದು ನಾರಾಯಣನೇ ಎಂದು ವೇದಗಳು ಸ್ಪಷ್ಟವಾಗಿ ಸಾರುತ್ತಿವೆ ಎಂದು ಆಚಾರ್ಯರು ಸಾಂಖ್ಯಮತವನ್ನು ಖಂಡಿಸಿ ತತ್ವವಾದವನ್ನು ಮಂಡಿಸಿದರು.

ಈಗಿನ ಕೆಲವು ವಿಜ್ಞಾನಿಗಳು ಸೃಷ್ಟಿಯ ಬಗ್ಗೆ ವಿವರಿಸುವ Big Bang theory ಯೂ ಕೂಡ ಇಲ್ಲಿ ಖಂಡಿಸಲ್ಪಟ್ಟಿತೆಂದು ತಿಳಿಯಬಹುದು.

(ಮುಂದುವರಿಯುವುದು)

(....24...ನೇ ಪಟದಿಂದ)

5) ತಂದೆಯಿಂದ ತಾಯಿಯ ಉದರಪ್ರವೇಶವನ್ನು ಸೂಚಿಸುವಾಗ 'ಜನಿಷ್ಯತಿ' ಎಂಬ ವ್ಯವಹಾರವೇ 'ಸೋಷ್ಯತಿ' .

6) ತಾಯಿಯಿಂದ ಉತ್ಪತ್ತಿಯಾದ ಮೇಲೆ ಅವನು 'ಹುಟ್ಟಿದ' ಎಂಬ ವ್ಯವಹಾರವೇ 'ಅಸೌಷ್ಟ' .

7) ಮರಣವೇ ಅವಭೃಥಸ್ನಾನ.

ಇದಕ್ಕೆ ಮೂರು ಮಂತ್ರಗಳಿವೆ. 1) ಅಕ್ಷತಮಸಿ 2) ಅಚ್ಯುತಮಸಿ 3) ಪ್ರಾಣಸಂಶಿತಮಸಿ ಎಂದು.

ಹೇ ಭಗವನ್! ನೀನು ಸ್ವರೂಪದಿಂದ ಅಕ್ಷಯನಾಗಿರುವಿ. ಗುಣಗಳಿಂದ ಚ್ಯುತಿರಹಿತನಾಗಿರುವಿ. ಮುಖ್ಯಪ್ರಾಣನಿಗಿಂತಲೂ ಅಧಿಕ ಸುಖಸ್ವರೂಪನಾಗಿರುವಿ' ಎಂದು ಈ ಮಂತ್ರಾರ್ಥ. ಈ ರೀತಿಯ ಯಜ್ಞದ ಕೊನೆಯಲ್ಲಿ ಚಿಂತನೀಯವಾದ ಭಗವದ್ರೂಪ ಅನಿರುದ್ಧ. ಇಂತಹ ಭಗವದ್ರೂಪೋಪಾಸನಾಮಯ ಯಜ್ಞಚಿಂತನೆಗೆ 'ಭಗವಂತನ ಅಪರೋಕ್ಷವೇ' ಮುಖ್ಯಫಲ.

ರೋಗಾದಿ ವಿಘ್ನಪರಿಹಾರ, ಆಯುರ್ವೃದ್ಧಿಗಳು ಅವಾಂತರ ಫಲ.

ಯಾವ ಜನ್ಮದಲ್ಲಿ ಈ ರೀತಿಯ ಅನುಸಂಧಾನ ಸಾಮರ್ಥ್ಯವನ್ನು ಭಗವಂತನು ನೀಡುತ್ತಾನೋ ಆಗಲೇ, ಕಳೆದು ಹೋದ ಸಕಲ ದೇಹಗಳಿಗೂ , ಮುಂದೆ ಬರುವ ಸಕಲದೇಹಗಳಿಗೂ ಇದೇ ಅನುಸಂಧಾನವೆಂದು ಚಿಂತಿಸಬೇಕು.

ಇದರಿಂದ ಭಗವದ್ಭಕ್ತರಾಗಲಿಚ್ಛಿಸುವ ಸಾಧಕರಿಗೆ ಸಕಲ ಜನ್ಮಗಳೂ ಭಗವತ್ಪೂಜಾತ್ಮಕವೆನಿಸುವವು.

(ಮುಂದುವರಿಯುವುದು)

**ಪ್ರಾಣಿಗಳಲ್ಲಿ ದಯೆವುಳ್ಳವರಾಗಿರಿ.**

# ಶ್ರೀವಿಷ್ಣುಪುರಾಣ

## ಪೃಥುಚಕ್ರವರ್ತಿಯು ಹೊಗಳಿಕೆಯನ್ನು ಸ್ವೀಕರಿಸಿದ

–ಸ್ಫೂರ್ತಿ

ಪೃಥುವು ಭೂಮಂಡಲದ ಒಡೆಯನಾದದ್ದನ್ನು ಕಂಡು ಪರ್ವತ, ಸಮುದ್ರವೇ ಮೊದಲ್ಗೊಂಡು ಸಮಸ್ತ ಚರಾಚರ ಪ್ರಪಂಚವೇ ಮುದಗೊಂಡಿತು. ಪೃಥುವು ಸಮುದ್ರದಲ್ಲಿ ಸಾಗಲು ಬಯಸಿದರೆ ಸಮುದ್ರವು ಸ್ತಬ್ಧವಾಗಿ ದಾರಿಕೊಡುತ್ತಿತ್ತು. ಪರ್ವತಗಳು ಪಕ್ಕಕ್ಕೆ ಸರಿದು ದಾರಿ ಬಿಡುತ್ತಿತ್ತು. ಎಲ್ಲೆಲ್ಲಿಯೂ ಪೃಥುವಿನ ರಥದ ಧ್ವಜಕ್ಕೆ ಅವಮಾನವಾಗಲಿಲ್ಲ.

### ಸೂತ–ಮಾಗಧರು ಬಂದರು

ಪೃಥುಚಕ್ರವರ್ತಿ ಹುಟ್ಟಿದ ಕೂಡಲೆ ಪೈತಾಮಹ ಯಜ್ಞವನ್ನು ನಡೆಸಿದ. ಆ ಯಜ್ಞದಲ್ಲಿ ಸೋಮಾಭಿಷವದ ದಿನ ಸೋಮಾಭಿಷವ ಭೂಮಿಯಲ್ಲಿ ಹುಟ್ಟಿ ಬಂದವನೇ ಸೂತ. ಅದೇ ಯಜ್ಞದಲ್ಲಿಯೇ ಬುದ್ಧಿವಂತನಾದ ಮಾಗಧನೂ ಹುಟ್ಟಿ ಬಂದನು. ಋಷಿಗಳು ಇವರಿಬ್ಬರನ್ನು ಸೂತ–ಮಾಗಧರೆಂದೇ ಕರೆದರು. ಪೃಥುವನ್ನು ಹೊಗಳಲು ಆದೇಶಿಸಿದರು. ಆಗ ಸೂತ–ಮಾಗಧರು 'ಈಗ ತಾನೇ ಹುಟ್ಟಿರುವ ಈ ಪೃಥುವಿನ ಯಾವ ಮಹತ್ತರವಾದ ಕರ್ಮವೂ ಇನ್ನು ಪ್ರಕಟವಾಗಿಲ್ಲ'.

**ಗುಣಾ ನ ಚಾಸ್ಯ ಜ್ಞಾಯಂತೇ ನ ಚಾಸ್ಯ ಪ್ರಥಿತಂ ಯಶಃ ।**

**ಸ್ತೋತ್ರಂ ಕಿಮಾಶ್ರಯಂ ತ್ವಸ್ಯ ಕಾರ್ಯಮಸ್ಮಾಭಿರುಚ್ಯತಾಮ್ ॥**

'ಇವನ ಒಳ್ಳೆಯ ಗುಣಗಳೂ ಇನ್ನೂ ತಿಳಿದಿಲ್ಲ. ಇವನ ಯಶಸ್ಸು ಎಲ್ಲೆಡೆಯೂ ಹರಡಿಲ್ಲ. ಮತ್ತ್ಯಾವ ಆಧಾರದಿಂದ ಇವನನ್ನು ಹೊಗಳಬೇಕೆಂದು ತಿಳಿಸಿರಿ?' ಎಂದು ಋಷಿಗಳನ್ನು ಪ್ರಶ್ನಿಸಿದರು.

ವಿಷ್ಣುಪುರಾಣದ ಈ ಶ್ಲೋಕ ಅತ್ಯಂತ ಸುಂದರವಾದುದು. ಹಿಂದೆ ಸೂತ–ಮಾಗಧ–ವಂಧಿಗಳು ಸಾಮಾನ್ಯವಾಗಿ ಎಲ್ಲ ರಾಜರ ಆಸ್ಥಾನದಲ್ಲಿಯೂ ನೆಲೆಸಿದ್ದರು. ಆದರೆ ಇವರು ಕೇವಲ ಹೊಗಳು ಭಟ್ಟರಲ್ಲ. ರಾಜನ ಮಹತ್ತರವಾದ ಕರ್ಮ, ಗುಣ, ಯಶಸ್ಸನ್ನಾಧರಿಸಿ ಹೊಗಳುವವರು. ಇವರ ಪೈಕಿ ಪುರಾಣಾದ್ಯರ್ಥಾನುಸಾರವಾಗಿ ಹೊಗಳುವವರು ಸೂತರು. ಪರಾಕ್ರಮವನ್ನಾಧರಿಸಿ ಹೊಗಳುವವರು ಮಾಗಧರು,



ಶುಭವನ್ನು ಹಾರೈಸುವವರು ವಂಧಿಗಳು. ಹೀಗೆ ಸೂತ–ಮಾಗಧ–ವಂಧಿಗಳು ಯಥಾರ್ಥವಾದ ಸ್ತುತಿಪಾಠಕರೇ ಹೊರತು ಕೇವಲ ಬಹುಮಾನಕ್ಕಾಗಿ ಇಲ್ಲ ಸಲ್ಲದ್ದನ್ನೆಲ್ಲ ಹೊಗಳುವ ಸುಳ್ಳುಗಾರರಲ್ಲ.

ಸೂತ–ಮಾಗಧರ ಪ್ರಶ್ನೆಗೆ ಋಷಿಗಳು 'ಇವನು ಮುಂದೆ ಯಾವ ಮಹತ್ತರವಾದ ಕಾರ್ಯ ಮಾಡಲಿದ್ದಾನೋ, ಇವನ ಯಾವ ಗುಣಗಳು ಮುಂದೆ ಪ್ರಕಟವಾಗುತ್ತವೆಯೋ ಅಂತಹ ಗುಣ–ಕರ್ಮಗಳನ್ನು ಹೊಗಳಿರಿ' ಎಂದು ಆದೇಶಿಸಿದರು. ಪೃಥುವಿಗೂ ಬಹಳ ಆನಂದವಾಯಿತು. ಒಳ್ಳೆಯ ಗುಣವುಳ್ಳವನನ್ನಾಗಿ ನನ್ನನ್ನು ಹೊಗಳಿರಿ ಏಕೆಂದರೆ

**ಸದ್ಗುಣೈಃ ಶ್ಲಾಘ್ಯತಾಮೇತಿ ತಸ್ಮಾಲ್ಲಭ್ಯಾ ಗುಣಾ ಮಮ ।**

**ತಸ್ಮಾದ್ಯದದ್ಯ ಸ್ತೋತ್ರೇಣ ಗುಣನಿರ್ವರ್ಣನಂ ತ್ವಿಮೌ ।**

**ಕರಿಷ್ಯೇತೇ ಕರಿಷ್ಯಾಮಿ ತದೇವಾಹಂ ಸಮಾಹಿತಃ ॥** (ವಿ.ಪು. 1–13–58)

ಮನುಷ್ಯ ಸದ್ಗುಣಗಳಿಂದಲೆ ಎಲ್ಲರಿಂದಲೂ ಹೊಗಳಿಸಿಕೊಳ್ಳಲು ಯೋಗ್ಯನಾಗುತ್ತಾನೆ. ಆದ್ದರಿಂದ ಅಂತಹ ಸದ್ಗುಣಗಳನ್ನು ನಾನು ಗಳಿಸಬೇಕಾಗಿದೆ. ಆದ್ದರಿಂದ ಇವರಿಬ್ಬರು ಯಾವ ಗುಣಗಳಿಂದ ನನ್ನನ್ನು ಹೊಗಳುತ್ತಾರೋ ಅದನ್ನೇ ಸಾವಧಾನಪೂರ್ವಕವಾಗಿ ಮಾಡಲು ಪ್ರಯತ್ನಿಸುತ್ತೇನೆ.

**ಯದಿಮೌ ವರ್ಜನೀಯಂ ಚ ಕಿಂಚಿದತ್ರ ವದಿಷ್ಯತಃ ।**

**ತದಹಂ ವರ್ಜಯಿಷ್ಯಾಮೀತ್ಯೇವಂ ಚಕ್ರೇ ಮತಿಂ ನೃಪಃ ॥** (1–13–59)

ಇವರಿಬ್ಬರು ಯಾವ ಅವಗುಣಗಳನ್ನು ತಿಳಿಸುತ್ತಾರೆ ಅವನ್ನು ತ್ಯಜಿಸುತ್ತೇನೆಂದು ಪೃಥುವು ನಿರ್ಧರಿಸಿದನು.

ವಿಷ್ಣುಪುರಾಣದ ಈ ಮಾತುಗಳು ಮನನೀಯವಾಗಿವೆ. ಯಾರು ಹೊಗಳಿದರೂ ಅವರ ಹೊಗಳಿಕೆಯಲ್ಲಿರುವ ಸದ್ಗುಣಗಳನ್ನು ನಮ್ಮಲ್ಲಿ ಅಳವಡಿಸಿಕೊಳ್ಳಬೇಕೆಂಬ ಭಾವನೆ ಇರಬೇಕು. ಯಾರು ಅವಗುಣಗಳಿಂದ ತೆಗಳಿದರೆ ಅಂತಹ ಅವಗುಣಗಳನ್ನು ತ್ಯಜಿಸಲು ಪ್ರಯತ್ನಿಸಬೇಕು. ಆಗ ಹೊಗಳಿಕೆ–ತೆಗಳಿಕೆ ನಮ್ಮನ್ನು ಹಿಗ್ಗಿಸುವುದಿಲ್ಲ, ಕುಗ್ಗಿಸುವುದಿಲ್ಲ.

ಋಷಿಗಳ ಆದೇಶದಂತೆ ಸೂತ–ಮಾಗಧರು ಪೃಥುಚಕ್ರವರ್ತಿಯನ್ನು, ಅವನು ಮುಂದೆ ಮಾಡಲಿರುವ ಮಹತ್ತರವಾದ ಕರ್ಮಗಳನ್ನು ಮನಸಾರ ಹೊಗಳಿದರು.

ಮುಂದುವರಿಯುವುದು

ಪ್ರಶ್ನೋತ್ತರ-ಪದಬಂಧ

# ನೆನಪಿನ ಅಂಗಳ

1. ಮಹಾಭಾರತದಲ್ಲಿರುವ ಪರ್ವಗಳೆಷ್ಟು?
2. ದುರ್ಯೋಧನನ ತಂಗಿಯ ಹೆಸರೇನು?
3. ತಾನು ಕೆಟ್ಟವನಾಗಿ, ತನ್ನ ಹೆಸರಿನಲ್ಲೂ ದುಷ್ಟಗ್ರಹವಿರುವ ಮಹಾಭಾರತದ ದುಷ್ಟ ಯಾರು?
4. ಕೃಷ್ಣನ ಸಾಕು ತಾಯಿ ಯಾರು?
5. ದೇಹವನ್ನು ಧರಿಸಿರುವವ! ಎಂಬ ಅರ್ಥಬರುವ, ಐದು ಅಕ್ಷರಗಳುಳ್ಳ ಹಾಗೂ 3ನೇ ಅಕ್ಷರ ಸೇರಿದಾಗ ಬಾಣ ಎಂಬ ಅರ್ಥ ಬರುವ ಪರಮಾತ್ಮನ ಹೆಸರು ಯಾವುದು?
6. ದಶಾವತಾರದಲ್ಲಿ 4ನೆಯದ್ದು ಯಾವುದು?
7. ಆಚಾರ್ಯಮಧ್ವರ ಅವತಾರ ಭೂಮಿ ಯಾವುದು?
8. ಶ್ರೀಕೃಷ್ಣಪರ್ಯಾಯ ಎಷ್ಟು ವರ್ಷಗಳಿಗೊಮ್ಮೆ ಬರುತ್ತದೆ?

ಕಳೆದ ಸಂಚಿಕೆಯ ಉತ್ತರ:

1. 18 2. ಅರ್ಜುನ 3. ಅತುಲ 4. ಧರ್ಮರಾಜ 5. ಹಾಲುಕಪ್ಪೇ?
6. ಮಧುಸೂದನ 7. ಬೆಂಕಿ 8. ಬೃಹದ್ರಥ 9. ಸಿಂಹಳ 10. 10ಲಕ್ಷ






ಎಡದಿಂದ ಬಲಕ್ಕೆ:

1. ವೃಕ್ಷದೊಂದಿಗೆ ಕೂಡಿದ ಯುದ್ಧ (3)
4. ಬಗೆಯ ನಡುವೆ ಕಾಮ (3)
5. ಸುರಿಯುವಿಕೆ ಸಂಸ್ಕೃತದಲ್ಲಿ (3)
7. ಗರ್ವದ ವಿರುದ್ಧ ಇಂದ್ರಿಯನಿಗ್ರಹ (2)
9. ರಮೆಯರಸ ಇಲ್ಲಿದ್ದಾನೆ (6)
10. ದೊಡ್ಡವರಲ್ಲಿ ಮಾಡಿಕೊಂಡ ಬೇಡಿಕೆ (3)



ಉತ್ತರ ಮುಂದಿನ ಸಂಚಿಕೆಯಲ್ಲಿ

ಮೇಲಿನಿಂದ ಕೆಳಕ್ಕೆ:

1. ಸಾವಿರ ಮೊಗಗಳುಳ್ಳ (6)
2. ಯೋಗ್ಯರಿಗೆ ಕೊಡುವಂತಹದ್ದು (2)
3. ಕನ್ನಡದ ಕಾಡು (3)
6. ಯುದ್ಧದ ನಡುವೆ ಗಂಡ (3)
8. ಸಂತೋಷವುಳ್ಳವ ಅಂತ್ಯಹ್ರಸ್ವವನ್ನು ಹೊಂದಿದ್ದಾನೆ (3)
10. ಜೇನಿನೊಳಗೆ ಕೈ! ದುಂಬಿಯೋ? (4)
12. ಜಾರಿ ಬೀಳದ ಬುದ್ಧಿವಂತ (2)